

# ಭೃಗುವಾಣಿ

## ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 29 ಏಪ್ರಿಲ್ - ಜೂನ್ 2016 ರೂ. 10/- ಸಂಚಿಕೆ 01





ಉಲ್ಲಾಸದ ವಸಂತೋತ್ಸವ





ಯಶಸ್ವೀ ಆನಂದ ಉದ್ಯೋಗ ಮೇಳ - 2016



ಯುಗಾದಿ ಸಂಭ್ರಮ - ಸಂಘ ಸಮಾಗಮ

**ಗಮನಿಸಿ**

10.7.2016 - ಪ್ರತಿಭಾ ಸ್ಪರ್ಧೆ
24.7.2016 - ಪ್ರತಿಭಾ ಮೇಳ ಮತ್ತು ಪುರಸ್ಕಾರ
15.8.2016 - ದುರ್ಗಾ ನಮಸ್ಕಾರ
11.9.2016 - ಗಣೇಶೋತ್ಸವ
18.9.2016 - ವಾರ್ಷಿಕ ಮಹಾಸಭೆ

*With best compliments from :*

# TEDMAG
# ENGINEERING & MANAGEMENT CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

- **MILK PROCESSING**
- **FOOD PROCESSING**
- **PLANT TISSUE CULTURE**
- **ALLIED INDUSTRIES**

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 29 ಸಂಚಿಕೆ 01

ಅಧ್ಯಕ್ಷರು :
ಗೀತಾ ವಾಸುದೇವ ರಾವ್

ಕಾರ್ಯದರ್ಶಿ :
ಎಸ್. ಹರಿದಾಸ ಉಪಾಧ್ಯ

ಸಂಪಾದಕರು :
ಎಂ. ಸತ್ಯನಾರಾಯಣ ಭಟ್

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಬಿ. ರಾಮದಾಸ ತಂತ್ರಿ
ಡಿ. ಶರತ್ ಕುಮಾರ ಭಟ್
ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ. ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ

ಸಲಹೆಗಾರರು :
ಶ್ರೀಮತಿ ವಿಜಯಲಕ್ಷ್ಮಿ ಭಟ್

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ

ವಿಳಾಸ :
ಆನಂದ ಬಳಗ
ಜೀವನ್ ಬಿಲ್ಡಿಂಗ್
11, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001
ಟೆಲಿಫ್ಯಾಕ್ಸ್ : 41138879

Website:
www.anandabalaga.org



# ಅಧ್ಯಕ್ಷರ ಲೇಖನಿಯಿಂದ...

ಸಹೃದಯ ಸದಸ್ಯ ಬಂಧುಗಳೇ,

ನಮ್ಮೆಲ್ಲರ ಅಚ್ಚುಮೆಚ್ಚಿನ ಆನಂದ ಬಳಗದ ಅಧ್ಯಕ್ಷೆಯಾಗುವ ಸುಯೋಗ ನನಗೆ ಒದಗಿಬಂದಿದೆ. ಇಂತಹ ಒಂದು ಜನಾನುರಾಗಿ ಬಳಗದ ಅಧ್ಯಕ್ಷೆಯಾಗಿ, ಬಳಗವನ್ನು ಮುನ್ನಡೆಸಿಕೊಂಡು ಹೋಗಬೇಕೆಂದು, ನೂತನ ಕಾರ್ಯಕಾರಿ ಸಮಿತಿಯವರು ಒತ್ತಾಯಿಸಿದಾಗ ಬೇಡ ಎನ್ನಲಾಗದೆ, ಬಳಗದ ಮೇಲಿರುವ ಅಭಿಮಾನ ಮತ್ತು ಪ್ರೀತಿಯಿಂದಾಗಿ ಒಪ್ಪಿಕೊಳ್ಳಲೇ ಬೇಕಾಯಿತು. ನನ್ನ ಮೇಲೆ ಧೃಢ ವಿಶ್ವಾಸವಿಟ್ಟು ಈ ಜವಾಬ್ದಾರಿಯನ್ನು ವಹಿಸಿಕೊಟ್ಟಿರುವುದಕ್ಕೆ ನಾನು ಬಳಗದ ಎಲ್ಲರಿಗೂ ಕೃತಜ್ಞಳಾಗಿರಲೇಬೇಕು.

ಆನಂದ ಬಳಗ ಇಂದು ಬೃಹದಾಕಾರವಾಗಿ ಬೆಳೆದು ಸುಮಾರು 1900 ಸದಸ್ಯರ ಬಲವನ್ನು ಹೊಂದಿದೆ. 28 ವರ್ಷಗಳ ಹಿಂದೆ, ನಮ್ಮ ಮಾವ ದಿವಂಗತ ಕಡಂದಲೆ ಕೃಷ್ಣ ಭಟ್ಟರು ಬಳಗವನ್ನು ಹುಟ್ಟುಹಾಕುವಲ್ಲಿ ದೊಡ್ಡ ಪಾತ್ರವನ್ನು ವಹಿಸಿದಲ್ಲದೆ, ಬಳಗದ ಮುಂದಿನ ದಿನಗಳಲ್ಲಿ ಇದನ್ನು ಪೋಷಿಸಿಕೊಂಡು ಬರುವಂತೆ ನಮಗೆ ನಿರ್ದೇಶಿಸಿದ್ದಾರೆ. ಅವರ ಅಣತಿಯಂತೆ ಬಳಗದ ಜೊತೆ ಜೊತೆಗೆ ಬೆಳೆದಿರುವ ನನಗೆ ಮಹಿಳಾ ವಿಭಾಗದ ಅಧ್ಯಕ್ಷೆಯಾಗಿ ದೀರ್ಘಕಾಲ ಸೇವೆ ಸಲ್ಲಿಸುವ ಅವಕಾಶವೂ ಲಭಿಸಿತ್ತು . ಬಳಗದ ಅವಿಭಾಜ್ಯ ಅಂಗವಾಗಿರುವ ಮಹಿಳಾ ವಿಭಾಗವು ತನ್ನ ವೈವಿಧ್ಯಪೂರ್ಣ ಕಾರ್ಯ ಚಟುವಟಿಕೆಗಳಿಂದ ಅತ್ಯಂತ ಜನಪ್ರಿಯವಾಗಿದೆ. ಇದಕ್ಕೆ ನಾನು ಕೇವಲ ನೆಪಮಾತ್ರ . ಮಹಿಳಾ ವಿಭಾಗದ ಸ್ನೇಹಿತೆಯರ ನಿಸ್ವಾರ್ಥ ಸೇವೆ ಮತ್ತು ಕಾರ್ಯಕ್ಷಮತೆಯಿಂದಾಗಿ ಮಹಿಳಾ ವಿಭಾಗ ಯಶ ಕಾಣಲು ಸಾಧ್ಯವಾಯಿತೆಂದು ನನಗೆ ಅರಿವಿದೆ. ಈಗಲೂ ಅದನ್ನೇ ಹೇಳುತ್ತಿದ್ದೇನೆ. ಬಳಗದಲ್ಲಿ ಅಧ್ಯಕ್ಷೆ ಸ್ಥಾನ ಕೇವಲ ಅಲಂಕಾರಿಕ ಪದವಿ. ಅಧ್ಯಕ್ಷರೊಬ್ಬರೇ ಏನನ್ನೂ ಮಾಡಲು ಸಾಧ್ಯವಿಲ್ಲ. ಬಳಗದ ಪದಾಧಿಕಾರಿಗಳು, ವಿವಿಧ ಉಪವಿಭಾಗಗಳ ಸಂಚಾಲಕರು, ಕಾರ್ಯಕಾರಿ ಸಮಿತಿಯ ಸದಸ್ಯರು ಎಲ್ಲದಕ್ಕಿಂತಲೂ ಹೆಚ್ಚಾಗಿ ಸದಸ್ಯ ಸಮುದಾಯದ ಸಕಾಲಿಕ ಸಹಕಾರ, ಬೆಂಬಲ ಮತ್ತು ಮಾರ್ಗದರ್ಶನ ಬಳಗದ ಬೆಳವಣಿಗೆಗೆ ಅತಿ ಮುಖ್ಯ . ಬಳಗವನ್ನು ಹತ್ತಿರದಿಂದ ಬಲ್ಲ ನನಗೆ, ನಿಮ್ಮೆಲ್ಲರ ಸಹಕಾರ ಖಂಡಿತಾ ಲಭಿಸಲಿದೆ ಎಂಬ ಧೈರ್ಯ ಇರುವುದರಿಂದಲೇ, ಈ ಅಧ್ಯಕ್ಷೆ ಸ್ಥಾನವನ್ನು ವಹಿಸಿಕೊಳ್ಳುವ ಧೈರ್ಯ ಮಾಡಿರುತ್ತೇನೆ.

ಬಳಗದಲ್ಲಿ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಅಧ್ಯಕ್ಷರಾಗಿದ್ದು, ತನ್ನ ಕ್ರಿಯಾಶೀಲ ಕಾರ್ಯದಕ್ಷತೆಯಿಂದ ಬಳಗವನ್ನು ಬಹಳಷ್ಟು ಮುನ್ನಡೆಸಿದ ಆತ್ಮೀಯ ಪಿ.ಎಸ್. ಬಾಗಿಲ್ತಾಯರವರು ತೆರವು ಮಾಡಿದ ಈ ಸ್ಥಾನವನ್ನು ನಿರ್ವಹಿಸುವುದು ತುಂಬಾ ಸವಾಲಿನ ಕೆಲಸ ಎಂಬ ಸತ್ಯಾಂಶ ನನಗೆ ತಿಳಿದಿದೆ. ಆದರೂ ಹಿರಿಯರ ಅನುಭವದ ಮಾರ್ಗದರ್ಶನ ಹಾಗೂ ಸ್ನೇಹಿತರ ಸಹಕಾರದಿಂದ ಬಳಗದ ಏಳಿಗೆಗಾಗಿ ಶಕ್ತಿ ಮೀರಿ ಶ್ರಮಿಸುವ ಸಂಕಲ್ಪ ನನ್ನದು. ಬಳಗದ ಆರಾಧ್ಯ ದೈವ ಉಡುಪಿಯ ಶ್ರೀಕೃಷ್ಣನ ಪರಮಾನುಗ್ರಹ ನಮ್ಮ ಮೇಲಿರುವಾಗ, ಹಾಗೂ ನಾವು ಗುರುಗಳ ಗುಲಾಮರಾಗಿರುವವರೆಗೆ ಬಳಗದ ಸಾರಥ್ಯವಹಿಸುವುದು ಕಷ್ಟವಾಗಲಾರದು ಎಂದು ನನ್ನ ಅಚಲ ವಿಶ್ವಾಸ.

ಹಾರ್ದಿಕ ಶುಭಾಶಯಗಳೊಂದಿಗೆ

(ಗೀತಾ ವಾಸುದೇವರಾವ್)

## Executive Committee Members : 2016-2018

| Name | Contact Numbers |
|---|---|
| ***President*** | |
| Geetha Vasudeva Rao | 98808 99997 |
| ***Vice President*** | |
| B. Ramachandra Upadhya | 99024 00072 |
| Smt. Vijayalakshmi Bhat S. | 98441 52107 |
| ***Secretary*** | |
| S. Haridas Upadhya | 94480 01892 |
| ***Treasurer*** | |
| Y. Radhakrishna | 98440 58851 |
| ***Convener, Cultural Wing*** | |
| H. Ramesh Bhat | 98450 24708 |
| ***Convener, Religious Wing*** | |
| P.N. Vishnumurthy Kuddannaya | 94803 05426 |
| ***Convener, Youth Wing*** | |
| M. Dinesh Rao | 99456 88955 |
| ***Convener, Edn. Assistance Program*** | |
| Shrart Chandra S.N. | 98860 40271 |
| ***Convener, Public Relation Wing*** | |
| Y. Jayantha Rao | 94482 74519 |
| ***Convener, Membership Devt. Wing*** | |
| M.K. Gurumurthy | 98440 22692 |
| ***Editor, Brughu Vani*** | |
| N. Sathyanarayana Bhat | 99458 02607 |
| ***Members*** | |
| Geetha P.R. Rao | 99459 38411 |
| K.N. Adiga | 94488 48154 |
| Kasturi Aithal | 98803 98353 |
| P.C. Rao | 98444 94630 |
| A. Sandeep Rao | 98450 98150 |
| ***Co-opted Members*** | |
| T.S. Nagaraj Upadhya | 99860 36338 |
| Jayaprakash Reddy | 98450 09669 |
| B.S. Balaehenadra Tolpadi | |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| Padubidri Raghavendra Rao | 2287 2705 |
| UAP Ballal | 2226 7609 |
| STR Madi | 99029 77948 |
| KVM Yerkadithya | 2663 1994 |
| ***Special Invitees*** | |
| P. Ramadas | 98450 25896 |
| N.R. Narayana Rao | 2239 1380 |
| M. Mohan Rao | 98453 79956 |
| M. Bhaskar Rao | 2669 5752 |
| Sudha M Rao | 99011 27738 |
| U V Krishna Murthy | 2361 1133 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| K. Gopala Krishna | 99801 28049 |
| S. Harish | 94484 97444 |

## ಒಳಪುಟಗಳಲ್ಲಿ . . .


| | |
|---|---|
| ಅಧ್ಯಕ್ಷರ ಮಾತು | 1 |
| ಸಂಪಾದಕೀಯ | 3 |
| ಆನಂದ ಬಳಗದ ನೂತನ ಅಧ್ಯಕ್ಷರಾಗಿ ಶ್ರೀಮತಿ ಗೀತಾ ವಾಸುದೇವರಾವ್ | 4 |
| ಉಲ್ಲಾಸದ ವಸಂತೋತ್ಸವ | 11 |
| ಕವನ - ನಾಲಾಯಕು | 13 |
| ಬಳಗದ ವ್ಯಾಸಂಗ ಸಹಾಯ ಯೋಜನೆ | 15 |
| ಆನಂದ ಉದ್ಯೋಗ ಮೇಳ 2016 | 16 |
| ಆನಂದ ಬಳಗ - ಯುವ ವಿಭಾಗದ ಕಾರ್ಯಚಟುವಟಿಕೆಗಳ ಮುನ್ನೋಟ | 19 |
| ಬೆಂಗಳೂರಿನಲ್ಲಿ ಪೂಜ್ಯ ಪುತ್ತಿಗೆ ಶ್ರೀಯವರ ಚಾತುರ್ಮಾಸ್ಯ | 20 |
| ಯೋಗಮಾರ್ಗದಿಂದ ಆರೋಗ್ಯ ಬಾಳ್ವೆ - ಕೆಲಸೂತ್ರಗಳು | 21 |
| ವೈಚಾರಿಕ ಲೇಖನ - ಮೌನದ ಮಹತ್ವ | 23 |
| ಅಮೇರಿಕದಲ್ಲಿ ಭಾರತೀಯರು ಮೂಡಿಸಿದ ಹೆಜ್ಜೆಗಳು | 25 |
| ಸುದ್ದಿ ಸಂಗ್ರಹ | 28 |



ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹಾ ಸಂಪಾದಕ ಮಂಡಳಿಯದಲ್ಲ.


## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ-ಪರಿಚಯ, ಪೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ . ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ಧಿ-ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :


**ಎಂ. ಸತ್ಯನಾರಾಯಣ ಭಟ್**
''ಕೃಷ್ಣಕೃಪಾ'', 12/1, 5ನೇ ಮೈನ್, ಇಟ್ಟುಮಡು,
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು-560 085
E-mail: msbhat1958@gmail.com

# ಸಂಪಾದಕೀಯ

ಪ್ರೀತಿಯ ಸದಸ್ಯ ಮಿತ್ರರೇ,

ಆನಂದ ಬಳಗದ ತ್ರೈಮಾಸಿಕ ಮುಖಪತ್ರಿಕೆ ಭೃಗುವಾಣಿಯ ಪ್ರಕಟಣೆಯ ಜವಾಬ್ದಾರಿಯನ್ನು ಮತ್ತೆ ನಮಗೆ ನೀಡಲಾಗಿದೆ. ಆನಂದ ಬಳಗದಂತಹ ಜನಪ್ರಿಯ ಹಾಗೂ ಪ್ರತಿಷ್ಠಿತ ಸಂಘವೊಂದರ ಮುಖಪತ್ರಿಕೆಯ ಸಂಪಾದಕತ್ವವನ್ನು, ನಿರ್ವಹಿಸುವ ಸದವಕಾಶವನ್ನು ಕಲ್ಪಿಸಿಕೊಟ್ಟಿರುವ ಬಳಗದ ನೂತನ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯು ನನ್ನ ಮೇಲಿಟ್ಟಿರುವ ಭರವಸೆ ಮತ್ತು ವಿಶ್ವಾಸಕ್ಕೆ ಆಭಾರಿಯಾಗಿದ್ದೇನೆ.

ಭೃಗುವಾಣಿಯ ಈ ಜವಾಬ್ದಾರಿ ನನಗೆ ಹೊಸದೇನಲ್ಲ. ಈ ಹಿಂದೆಯೂ ಈ ಕಾರ್ಯವನ್ನು ನಿರ್ವಹಿಸುವ ಸುಯೋಗ ಲಭಿಸಿದ್ದು, ಆ ಅವಧಿಯಲ್ಲಿ ಕಾರ್ಯಕಾರಿ ಸಮಿತಿ ಹಾಗೂ ಸದಸ್ಯರು ನೀಡಿದ ಮಾರ್ಗದರ್ಶನ ಮತ್ತು ಸಹಕಾರದ ಧೈರ್ಯದಲ್ಲಿ ಹಾಗೂ ಮುಂದಿನ ದಿನಗಳಲ್ಲೂ ಇದೇ ರೀತಿಯ ಬೆಂಬಲದ ನಿರೀಕ್ಷೆಯೊಂದಿಗೆ ಹೊಸ ಕಾರ್ಯನಿಯೋಜನೆಯನ್ನು ಪ್ರಾರಂಭಿಸುತ್ತಿದ್ದೇವೆ.

ಭೃಗುವಾಣಿಯ ಪ್ರಕಟಣೆಯ ಕೆಲಸ ಸಂಪಾದಕರಿಂದ ಮಾತ್ರ ಸಾಧ್ಯವಾಗುವುದಿಲ್ಲ ಎಂಬ ಅರಿವು ನನಗಿದೆ. ಆದರೆ ಸಂಪಾದಕ ಮಂಡಳಿ ಸದಸ್ಯರ ಸಕಾಲಿಕ ನೆರವು, ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳ ಸದಾಕಾಲದ ಮಾರ್ಗದರ್ಶನ, ಜಾಹೀರಾತುದಾರರ ಉದಾರ ಪ್ರೋತ್ಸಾಹ ಹಾಗೂ ಪತ್ರಿಕೋದ್ಯಮದಲ್ಲಿ ಇರುವ ಅಲ್ಪ-ಸ್ವಲ್ಪ ಅನುಭವವದಿಂದಾಗಿ ಈ ಕೆಲಸ ಕಠಿಣವಾಗಲಾರದು ಎಂಬ ಧೈರ್ಯವೂ ನನಗಿದೆ.

ತಮಗೆಲ್ಲಾ ತಿಳಿದಿರುವ ಹಾಗೆ ಯಾವುದೇ ಪತ್ರಿಕೆಯ ಜೀವಾಳ ಲೇಖಕರು. ಕಳೆದ ಅವಧಿಯಲ್ಲಿ ಭೃಗುವಾಣಿಯ ಸಂಪಾದಕರಾಗಿ ಉತ್ತಮ ಸೇವೆ ಮಾಡಿದ ಹಿರಿಯರಾದ ಶ್ರೀ ಹರಿದಾಸ ಉಪಾಧ್ಯರವರು ಇತ್ತೀಚಿನ ಸಂಚಿಕೆಯ ಸಂಪಾದಕೀಯದಲ್ಲಿ ಪ್ರಸ್ತಾಪಿಸಿರುವಂತೆ, ನಮ್ಮ ಸದಸ್ಯರು ಬರೆಯುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕಾಗಿದೆ. ಸುಮಾರು 1900 ಸದಸ್ಯರ ಬಲವುಳ್ಳ ಬಳಗದ ಪತ್ರಿಕೆಗೆ ಲೇಖನ-ಬರಹಗಳ ಕೊರತೆಯಾಗಲೇಬಾರದು. ಕೆಲವು ಸದಸ್ಯ ಮಿತ್ರರು ಭೃಗುವಾಣಿಗೆ ಲೇಖನ, ಕವನ, ಬರಹಗಳನ್ನು ನೀಡುತ್ತಾ ಇರುವುದು ಸಂತಸದ ವಿಚಾರವಾದರೂ, ಇನ್ನಷ್ಟು ಸದಸ್ಯರು ಈ ದಿಸೆಯಲ್ಲಿ ಮುಂದೆ ಬರಬೇಕೆಂದು ನಮ್ಮ ಕಳಕಳಿಯ ಕೋರಿಕೆ ಮತ್ತು ವಿನಮ್ರ ಅಪೇಕ್ಷೆ.

ಸಾಮಾನ್ಯವಾಗಿ ಜುಲೈ-ಸೆಪ್ಟೆಂಬರ್ ಅವಧಿಯೆಂದರೆ ಬಳಗದ ಚಟುವಟಿಕೆಗಳ ಅವಧಿ. ನಾಲ್ಕಾರು ಕಾರ್ಯಕ್ರಮಗಳಿವೆ. ಇವುಗಳ ವಿವರಗಳನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ಅಪೇಕ್ಷೆ. ಹಾಗೆನೇ ಬಳಗದ ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ ನಡೆದ ವರ್ಷದ ಮೊದಲ ಕಾರ್ಯಕ್ರಮ ವಸಂತೋತ್ಸವ ಹಾಗೂ ಯುವ ವಿಭಾಗದವರು ಸಂಯೋಜಿಸಿರುವ 'ಆನಂದ-ಉದ್ಯೋಗ' ಎಂಬ ಉದ್ಯೋಗ ಮೇಳ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಬಳಗದ ಸದಸ್ಯರು ಗಣನೀಯ ಸಂಖ್ಯೆಯಲ್ಲಿ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಈ ಎರಡೂ ಕಾರ್ಯಕ್ರಮಗಳನ್ನು ಉತ್ತಮವಾಗಿ ನಿರ್ವಹಿಸಿದ ಆಯಾ ಬಳಗದ ಸಂಚಾಲಕರನ್ನು ಮತ್ತು ಅವರ ಕಾರ್ಯ ತಂಡದ ಶ್ರಮವನ್ನು ಶ್ಲಾಘಿಸುತ್ತಾ , ಈ ಕಾರ್ಯಚಟುವಟಿಕೆಗಳ ವರದಿಗಳನ್ನೂ ಪ್ರಕಟಿಸಲಾಗಿದೆ.

ಸದ್ಯ ಸಾಕಲ್ವಾ....? ಮುಂದಿನ ಸಂಚಿಕೆಯಲ್ಲಿ ಮತ್ತೆ ಮಾತಾಡೋಣ. ನಿಮ್ಮೆಲ್ಲರ ಸಹಕಾರ, ಸಲಹೆ, ಸೂಚನೆಗಳು ನಮಗೆ ಬೇಕೇ ಬೇಕು. ನೀಡುತ್ತೀರಿ ಎಂಬ ವಿಶ್ವಾಸದೊಂದಿಗೆ ಮತ್ತೊಮ್ಮೆ ನಮನಗಳು.

**(ಎಂ. ಸತ್ಯನಾರಾಯಣ ಭಟ್)**
ಸಂಪಾದಕ



# ಆನಂದ ಬಳಗದ ನೂತನ ಅಧ್ಯಕ್ಷರಾಗಿ ಶ್ರೀಮತಿ ಗೀತಾ ವಾಸುದೇವರಾವ್ ಆಯ್ಕೆ

ಆನಂದ ಬಳಗದ 2016-2018ನೇ ಅವಧಿಗೆ ಅಧ್ಯಕ್ಷರಾಗಿ ಶ್ರೀಮತಿ ಗೀತಾ ವಾಸುವೇವರಾವ್ ರವರು ಆಯ್ಕೆಯಾಗಿದ್ದಾರೆ. ಬಳಗದ ಮಹಿಳಾ ವಿಭಾಗದ ಅಧ್ಯಕ್ಷರಾಗಿ ಕಳೆದ ಹಲವು ವರ್ಷಗಳಿಂದ ಈ ವಿಭಾಗವನ್ನು ಮುನ್ನಡೆಸಿಕೊಂಡು ಬಂದಿದ್ದ, ಶ್ರೀಮತಿ ಗೀತಾ ವಾಸುದೇವರಾವ್ ಮುಂದಿನ ಎರಡು ವರುಷಗಳ ಅವಧಿಯಲ್ಲಿ ಆನಂದ ಬಳಗದ ಸಾರಥ್ಯವನ್ನು ವಹಿಸಲಿದ್ದಾರೆ. ಆನಂದ ಬಳಗಕ್ಕೆ ತವರು ಮನೆಯಂತಿರುವ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಮಾಲಿಕರಾದ ಶ್ರೀ ಕೆ. ವಾಸುದೇವರಾವ್‌ರವರ ಪತ್ನಿಯಾಗಿರುವ ಶ್ರೀಮತಿ ಗೀತಾರಾವ್ ತಮ್ಮ ಈ ಪ್ರತಿಷ್ಠಿತ ಹೋಟೆಲ್‌ನ ಆಗು-ಹೋಗುಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಆನಂದ ಬಳಗದ ಸ್ಥಾಪನೆಯ ಸಂದರ್ಭದಲ್ಲಿ ತಮ್ಮ ಮಾವ ದಿವಂಗತ ಕಡಂದಲೆ ಕೃಷ್ಣರಾವ್‌ರವರು, ಆನಂದ ಬಳಗವನ್ನು ಪೋಷಿಸಿಕೊಂಡು ಹೋಗುವ ಬಗ್ಗೆ ನೀಡಿರುವ ಪ್ರೀತಿಯ ಆದೇಶವನ್ನು ಮತ್ತು ಬಯಕೆಯನ್ನು ಶಿರಸಾ ವಹಿಸಿಕೊಂಡು ಆನಂದ ಬಳಗದ ಪಾಲನೆ-ಪೋಷಣೆ ಮಾಡಿಕೊಂಡು ಬರುತ್ತಿರುವ ಶ್ರೀಮತಿ ಗೀತಾ ವಾಸುದೇವರಾವ್ ಉತ್ತಮ ಸಂಘಟನಾ ಚತುರರು ಹಾಗೂ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಉದಾರಿಗಳು. ತಂದೆಯವರಾದ ಕುತ್ತೆತ್ತೂರು ಸೀತಾರಾಮ ಆಚಾರ್ಯ ಹಾಗೂ ಮಾವ ಕಡಂದೆಲೆ ಕೃಷ್ಣ ಭಟ್‌ರವರ ಅಕ್ಕರೆಯ ಒಡನಾಟದಲ್ಲಿ ಜೀವನ ರೂಪಿಸಿದ ಶ್ರೀಮತಿ ಗೀತಾರಾವ್, ಆ ಮಹನೀಯರಲ್ಲಿದ್ದ ಶಿಸ್ತು , ನಿಷ್ಠೆ, ಕರ್ತವ್ಯ ಪ್ರಜ್ಞೆ ಮೊದಲಾದ ಸದ್ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ತನ್ನ ಎಳೆಯ ವಯಸ್ಸಿನಲ್ಲೇ ಮದರಾಸಿನಲ್ಲಿ ಯೂತ್ ಕಾಂಗ್ರೆಸ್‌ನ ಕಾರ್ಯಕರ್ತೆಯಾಗಿ ಸೇರಿದ್ದ ಇವರಿಗೆ ಸಮಾಜ-ಸೇವೆ ಅಚ್ಚುಮೆಚ್ಚಿನ ಆಯ್ಕೆ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆದಂತೆ, ದೇವರು ಕೊಟ್ಟಿರುವುದನ್ನು ಜನರಿಗೇ ಕೊಡುವ ಮೂಲಕ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿರುವ ಶ್ರೀಮತಿ ಗೀತಾ ರಾವ್ 'ಭೃಗುವಾಣಿ'ಯ ಅಧ್ಯಕ್ಷೀಯ ಮಾತಿನಲ್ಲಿ ದೇವರ ನಾಮವನ್ನು ಪ್ರಸ್ತಾಪಿಸುವುದು ಮಾತ್ರವಲ್ಲ ಆ ಹಾಡನ್ನು 'ಭೃಗುವಾಣಿ'ಯಲ್ಲಿ ನೀಡುವಂತೆ ಸೂಚಿಸಿರುತ್ತಾರೆ. ಧಾರ್ಮಿಕ ಆಚಾರ-ವಿಚಾರಗಳಲ್ಲಿ ಅತ್ಯಂತ ಶ್ರದ್ಧೆಯುಳ್ಳ ಇವರು ಪರಮ ದೈವಭಕ್ತೆ. ಸ್ವತಃ ಸಂಗೀತ ಕಲಾವಿದರಾಗಿರುವ ಶ್ರೀಮತಿ ಗೀತಾರವರಿಗೆ ಸಂಗೀತ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ರಂಗದಲ್ಲಿ ಅಪಾರ ಆಸಕ್ತಿ. ಆನಂದ ಬಳಗ ನಡೆದುಕೊಂಡು ಬಂದ ಪ್ರಗತಿಯ ಪಥದಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಹೆಜ್ಜೆ ಹಾಕಿ ಬಳಗವನ್ನು ಇನ್ನಷ್ಟು ಮುನ್ನಡೆಸುವ ಸಂಕಲ್ಪ ಮಾಡಿರುವ ನೂತನ ಅಧ್ಯಕ್ಷರಿಗೆ ಭೃಗುವಾಣಿಯ ಹಾರ್ದಿಕ ಅಭಿನಂದನೆಗಳು ಮತ್ತು ಶುಭ ಹಾರೈಕೆಗಳು.

ಶ್ರೀಮತಿ ಗೀತಾ ವಾಸುದೇವರಾವ್ ಅವರ ನೇತೃತ್ವದ ಹೊಸ ಕಾರ್ಯತಂಡದ ವಿವರ ಈ ರೀತಿ ಇದೆ :

| | |
|---|---|
| ಅಧ್ಯಕ್ಷರು | : ಶ್ರೀಮತಿ ಗೀತಾ ವಾಸುದೇವ ರಾವ್ |
| ಉಪಾಧ್ಯಕ್ಷರು | : ಶ್ರೀ ಬಾ. ರಾಮಚಂದ್ರ ಉಪಾಧ್ಯ |
| | ಶ್ರೀಮತಿ ವಿಜಯಲಕ್ಷ್ಮಿ ಭಟ್ |
| ಕಾರ್ಯದರ್ಶಿ | : ಶ್ರೀ ಎಸ್. ಹರಿದಾಸ್ ಉಪಾಧ್ಯ |
| ಕೋಶಾಧಿಕಾರಿ | : ಶ್ರೀ ವೈ . ರಾಧಾಕೃಷ್ಣ |
| ಸಂಚಾಲಕರು | : |
| ಸಾಂಸ್ಕೃತಿಕ ವಿಭಾಗ | : ಶ್ರೀ ಹೆಚ್. ರಮೇಶ್ ಭಟ್ |
| ಯುವ ವಿಭಾಗ | : ಶ್ರೀ ಎಂ. ದಿನೇಶ್‌ರಾವ್ |
| ಧಾರ್ಮಿಕ ವಿಭಾಗ | : ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯ |
| ವ್ಯಾಸಂಗ ಸಹಾಯ ಯೋಜನೆ | : ಶ್ರೀ ಎಸ್.ಎನ್. ಶರತ್‌ಚಂದ್ರ |
| ಸಾರ್ವಜನಿಕ ಸಂಪರ್ಕ | : ಶ್ರೀ ವೈ ಜಯಂತರಾವ್ |
| ಸದಸ್ಯತ್ವ ಅಭಿವೃದ್ಧಿ | : ಶ್ರೀ ಎಂ.ಕೆ. ಗುರುಮೂರ್ತಿ |
| ಸಂಪಾದಕರು, ಭೃಗುವಾಣಿ | : ಶ್ರೀ ಎಂ. ಸತ್ಯನಾರಾಯಣ ಭಟ್ |

ನೂತನ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ವಿಭಾಗಗಳ ಸಂಚಾಲಕರು ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೆ, ಭೃಗುವಾಣಿಯ ಅಭಿನಂದನೆಗಳು.

## ಗಮನಿಸಿ ! ಭಾಗವಹಿಸಿ !

# ಮಕ್ಕಳ ಪ್ರತಿಭಾಸ್ಪರ್ಧೆ 10.7.2016

ಸ್ಥಳ : **ಅಜಂತಾ ಹೋಟೆಲ್‌ನ ಆವರಣ**, ಎಂ.ಜಿ.ರಸ್ತೆ , ಬೆಂಗಳೂರು–560 001

ಆನಂದ ಬಳಗದ ಸಾಂಸ್ಕೃತಿಕ ಸಮಿತಿಯವರ ನೇತೃತ್ವದಲ್ಲಿ ಮಕ್ಕಳ ಪ್ರತಿಭಾ ಸ್ಪರ್ಧೆಗಳನ್ನು ದಿನಾಂಕ 10.7.2016ರ ಭಾನುವಾರ ಏರ್ಪಡಿಸಲಾಗಿದೆ. ಈ ಸ್ಪರ್ಧೆಗಳು 6ರಿಂದ 18 ವರ್ಷದ ಒಳಗಿನ ಬಾಲಕ/ಬಾಲಕಿಯರಿಗೆ ಸೀಮಿತವಾಗಿದ್ದು ವಿವಿಧ ಸ್ಪರ್ಧೆಗಳ ವಿವರ ಈ ರೀತಿ ಇದೆ :

| ಕ್ರ.ಸಂ | ಸ್ಪರ್ಧೆಗಳ ವಿವರ | ಸಮಯ | ವಯೋಮಿತಿ |
|---|---|---|---|
| 1 | ಚಿತ್ರಲೇಖನ | ಬೆಳಿಗ್ಗೆ 10.15 ರಿಂದ 11.45ರವರೆಗೆ | 6 ವರ್ಷಗಳವರೆಗೆ<br>6–12 ವರ್ಷಗಳವರೆಗೆ<br>12–18 ವರ್ಷಗಳವರೆಗೆ |
| 2 | ಸಂಸ್ಕೃತ ಶ್ಲೋಕ ಪಠಣ | ಮಧ್ಯಾಹ್ನ 11.45 ರಿಂದ 1.30 ರವರೆಗೆ | 6 ವರ್ಷಗಳವರೆಗೆ<br>(ಯಾವುದಾದರು ಸಂಸ್ಕೃತ ಶ್ಲೋಕ)<br>6–12 ವರ್ಷಗಳವರೆಗೆ<br>(ವಿಷ್ಣುಸಹಸ್ರನಾಮದ 11–40ನೇ ಶ್ಲೋಕದವರೆಗಿನ ಯಾವುದಾದರೂ 10 ಶ್ಲೋಕಗಳು) |
| 3 | ಭೋಜನ ವಿರಾಮ | 1.30 ರಿಂದ 2.00 | |
| 4 | ದೇವರ ನಾಮ | ಮಧ್ಯಾಹ್ನ 2.00ರಿಂದ 2.45 | 12–18 ವರ್ಷಗಳವರೆಗೆ |
| 5 | ಛದ್ಮ ವೇಷ (ಫ್ಯಾನ್ಸಿ ಡ್ರೆಸ್) | ಅಪರಾಹ್ನ 2.45 ರಿಂದ 3.30ರವರೆಗೆ | 12 ವರ್ಷಗಳವರೆಗೆ |
| 6 | ದೇವರ ನಾಮ | ಅಪರಾಹ್ನ 3.30 ರಿಂದ 4.15 ರವರೆಗೆ | 6–12 ವರ್ಷಗಳವರೆಗೆ |
| 7 | ಭಾವಗೀತೆ/ಚಲನಚಿತ್ರಗೀತೆ | ಸಂಜೆ 4.15 ರಿಂದ 5.00 ರವರೆಗೆ | 12–18 ವರ್ಷಗಳವರೆಗೆ |
| 8 | ಏಕಪಾತ್ರಾಭಿನಯ | ಅಪರಾಹ್ನ 5.00ರಿಂದ 6.30ರವರೆಗೆ | 10–18 ವರ್ಷಗಳವರೆಗೆ |

**ಸೂಚನೆ : 1) ಪ್ರತಿಸ್ಪರ್ಧೆಯಲ್ಲಿ ಕನಿಷ್ಠ ಆರು ಸ್ಪರ್ಧಿಗಳು ಇದ್ದರೆ ಮಾತ್ರ ಸ್ಪರ್ಧೆಯನ್ನು ನಡೆಸಲಾಗುವುದು.**
**2) ಛದ್ಮವೇಷದಲ್ಲಿ ವೇಷ ಭೂಷಣಗಳಿಗೇ ಪ್ರಾಮುಖ್ಯತೆ ಹೊರತು, ಅಭಿನಯ ಮತ್ತು ಮಾತುಗಾರಿಕೆಗಲ್ಲ.**

ಮಕ್ಕಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ಈ ಅವಕಾಶದ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ಕೋರಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ತಮ್ಮ ಹೆಸರುಗಳನ್ನು ಶ್ರೀಮತಿಯರಾದ ಚಂದ್ರಿಕಾ ರಾಜೇಶ್ ರಾವ್ (9986938802)/ ಮಾಧವಿ ಬಲ್ಲಾಳ್ (9986039107)/ಗೀತಾ ಪಿ. ರಾವ್ (9945938411) ಅಥವಾ ಹೆಚ್. ರಮೇಶ್ ಭಟ್ (9845024708) ಇವರಲ್ಲಿ ದಿನಾಂಕ 8.7.2016ರ ಒಳಗಾಗಿ ಹೆಸರನ್ನು ನೋಂದಾಯಿಸಿ ಕೊಳ್ಳಬೇಕಾಗಿ ವಿನಂತಿ

# ಪ್ರತಿಭಾ ಮೇಳ ಮತ್ತು ಪುರಸ್ಕಾರ
# 24.7.2016

ಆನಂದ ಬಳಗದ ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ ದಿನಾಂಕ 24.7.2016ರ ಭಾನುವಾರ ಸಂಜೆ 4.25ಕ್ಕೆ "**ಮಕ್ಕಳ ಮೇಳ ಮತ್ತು ಪ್ರತಿಭಾ ಪುರಸ್ಕಾರ**" ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ಆಕಾಶವಾಣಿಯ ನಿವೃತ್ತ ಸಹಾಯಕ ನಿಲಯ ನಿರ್ದೇಶಕಿ ಹಾಗೂ ಖ್ಯಾತ ಹಿರಿಯ ಕಲಾವಿದೆ

## ಶ್ರೀಮತಿ ಯಮುನಾ ಮೂರ್ತಿ

ಇವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಸ್ಥಳ : **ಎ.ಡಿ.ಎ. ರಂಗಮಂದಿರ**

ಜೆ.ಸಿ. ರಸ್ತೆ , ಬೆಂಗಳೂರು–560 001

## ಕಾರ್ಯಕ್ರಮ

| | | |
|---|---|---|
| ಸಂಜೆ 3.30–4.15 | : | ಲಘು ಉಪಾಹಾರ |
| ಸಂಜೆ 4.15 | : | ಸಭಾ ಕಾರ್ಯಕ್ರಮ |
| | : | ದಿನಾಂಕ 10.7.2016 ರಂದು ನಡೆದ ಪ್ರತಿಭಾಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ |
| | : | 2015–16ರ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ |

### ಮಕ್ಕಳಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ

ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಕಾಲಕ್ಕೆ ಆಗಮಿಸಿ ಬಳಗದ ಬಾಲಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

**ಗೀತಾ ವಾಸುದೇವರಾವ್**
ಅಧ್ಯಕ್ಷರು, ಆನಂದ ಬಳಗ

**ಎಸ್. ಹರಿದಾಸ್ ಉಪಾಧ್ಯ**
ಕಾರ್ಯದರ್ಶಿ, ಆನಂದ ಬಳಗ

**ಹೆಚ್.ರಮೇಶ್ ಭಟ್**
ಸಂಚಾಲಕರು, ಸಾಂಸ್ಕೃತಿಕ ವಿಭಾಗ



ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಕೆ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಸ್ತುತೆ ॥





# ದೀಪ ದುರ್ಗಾ ನಮಸ್ಕಾರ

**ದಿನಾಂಕ 15.8.2016, ಸೋಮವಾರ**

ಪ್ರಿಯ ಸದಸ್ಯ ಬಾಂಧವರೇ,

ಕಲಿಯುಗದಲ್ಲಿ ಶೀಘ್ರಫಲವನ್ನು ನೀಡುವ ಶ್ರೀ ದುರ್ಗಾಮಾತೆಯ ಆರಾಧನೆ ನಿಮಗೆ, ನಮಗೆ ಮತ್ತು ಬಳಗಕ್ಕೆ ಶ್ರೇಯಸ್ಕರ. ಈ ಅಂಶವನ್ನು ಮನಗಂಡು, ನಮ್ಮ ಬಳಗವು ಕಳೆದ ಕೆಲವಾರು ವರ್ಷಗಳಿಂದ ಪ್ರತಿವರ್ಷವೂ ಸಾಮೂಹಿಕ ದೀಪ ದುರ್ಗಾ ನಮಸ್ಕಾರವನ್ನು ವಿಜೃಂಭಣೆಯಿಂದ ನೆರವೇರಿಸುತ್ತಾ ಬಂದಿದೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿಬಂದು ಸಕ್ರಿಯವಾಗಿ ಪಾಲ್ಗೊಂಡು, ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ.

ಈ ವರ್ಷದ ದೀಪ ದುರ್ಗಾ ನಮಸ್ಕಾರವನ್ನು ಬಳಗದ ಧಾರ್ಮಿಕ ವಿಭಾಗದ ನೇತೃತ್ವದಲ್ಲಿ ಮತ್ತು ಇತರ ವಿಭಾಗಗಳ ಸಹಯೋಗದಲ್ಲಿ ದಿನಾಂಕ 15.8.2016ರ ಸೋಮವಾರ (ಸ್ವಾತಂತ್ರ್ಯೋತ್ಸವ ದಿನ) ಸಂಜೆ 4.25ರಿಂದ ಏರ್ಪಡಿಸಲಾಗಿದೆ.

ಸ್ಥಳ : **ಆನಂದ ಸಭಾಗೃಹ,** ಬನ್ನೇರುಘಟ್ಟ ರಸ್ತೆ, ಬೆಂಗಳೂರು

ಸೇವಾ ವಿವರ : ಪೂರ್ಣಸೇವೆ – ರೂ 1000/–
ಪುಷ್ಪಾಲಂಕಾರ – ರೂ 500/–
ಸೇವಾ ಸಂಕಲ್ಪ – ರೂ 250/–

ವಿ.ಸೂ: ಪೂಜಾ ಕಾರ್ಯಕ್ರಮದ ನಂತರ ವಿಶೇಷ ಭೋಜನ ವ್ಯವಸ್ಥೆ ಮಾಡಲಾಗಿದೆ.

ಸದಸ್ಯ ಮಿತ್ರರು ಅಧಿಕ ಸಂಖ್ಯೆಯಲ್ಲಿ ಆಗಮಿಸಿ, ಈ ವಿಶೇಷ ಮತ್ತು ಅಪರೂಪದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

| **ಗೀತಾ ವಾಸುದೇವರಾವ್** | **ಎಸ್. ಹರಿದಾಸ ಉಪಾಧ್ಯ** | **ಪಿ.ಎನ್.ವಿಷ್ಣುಮೂರ್ತಿ ಕುದ್ದಣ್ಣಾಯ** |
|---|---|---|
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದ ಬಳಗ | ಸಂಚಾಲಕರು, ಧಾರ್ಮಿಕ ವಿಭಾಗ |

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

| **ಪಿ.ಎನ್.ವಿಷ್ಣುಮೂರ್ತಿ ಕುದ್ದಣ್ಣಾಯ** | **ಶ್ರೀಮತಿ ವಿಜಯಲಕ್ಷ್ಮಿ ಭಟ್** | **ವೈ.ಜಯಂತರಾವ್** |
|---|---|---|
| 9480305426 | 9448001892 | 9448274519 |

ಸೂಚನೆ : 1) ಸದಸ್ಯರು ಸಾಂಪ್ರದಾಯಿಕ ಉಡುಪಿನಲ್ಲಿ ಬರಬೇಕಾಗಿ ವಿನಂತಿ
2) ದೇವಿಗೆ ಪ್ರಿಯವಾದ ಕೇಪುಳ ಹೂ ಲಭ್ಯವಿದ್ದರೆ ಅದನ್ನು ಬಿಡಿಸಿ, ತರಬೇಕಾಗಿ ಕೋರಿಕೆ

–ಸತ್ಯ

# ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ಆನಂದ ಬಳಗವು ಪ್ರತಿವರ್ಷದಂತೆ ಈ ವರ್ಷವೂ ಬಳಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಅವರ ಪ್ರತಿಭೆಯನ್ನು ಪುರಸ್ಕರಿಸಲಿದೆ. 2016ರ ಮಾರ್ಚ್/ಏಪ್ರಿಲ್ ತಿಂಗಳಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು 2ನೇ ಪಿಯುಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು.

ಪುರಸ್ಕಾರಕ್ಕಾಗಿ ಪರಿಗಣಿಸುವ ಅಂಕಗಳ ವಿವರ

| | |
|---|---|
| ಎಸ್.ಎಸ್.ಎಲ್.ಸಿ/10ನೇ ತರಗತಿ | ಶೇಕಡಾ 91 ಮತ್ತು ಅದಕ್ಕಿಂತ ಜಾಸ್ತಿ |
| ಸಿ.ಬಿ.ಎಸ್.ಸಿ. | ಸಿ.ಜಿ.ಪಿ.ಎ. 9.6 ಮತ್ತು ಅದಕ್ಕಿಂತ ಜಾಸ್ತಿ |
| ಐ.ಸಿ.ಎಸ್.ಸಿ. | ಶೇಕಡಾ 91 ಮತ್ತು ಅದಕ್ಕಿಂತ ಜಾಸ್ತಿ |
| ದ್ವಿತೀಯ ಪಿ.ಯು.ಸಿ./12ನೇ ತರಗತಿ | ಸೈನ್ಸ್/ವಿಜ್ಞಾನ ಶೇಕಡಾ 90 ಮತ್ತು ಅದಕ್ಕಿಂತ ಜಾಸ್ತಿ<br>ಕಾಮರ್ಸ್/ವಾಣಿಜ್ಯ ಶೇಕಡಾ 90 ಮತ್ತು ಅದಕ್ಕಿಂತ ಜಾಸ್ತಿ<br>ಆರ್ಟ್ಸ್/ಕಲೆ ಶೇಕಡಾ 85 ಮತ್ತು ಅದಕ್ಕಿಂತ ಜಾಸ್ತಿ |

ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ, ಬಳಗದ ಸದಸ್ಯರ ಜೊತೆಗಿನ ಸಂಬಂಧ, ದೂರವಾಣಿ ಸಂಖ್ಯೆ ಮೊದಲಾದ ವಿವರಗಳು ಹಾಗೂ ಅಂಕಪಟ್ಟಿಯ ಪ್ರತಿಯನ್ನು ಆನಂದ ಬಳಗದ ಕಛೇರಿಗೆ ದಿನಾಂಕ 20.7.2016 ರ ಮುಂಚಿತವಾಗಿ ತಲಪುವಂತೆ ಕಳುಹಿಸಲು ಕೋರಲಾಗಿದೆ. ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ದೂರವಾಣಿ ಮೂಲಕ ತಿಳಿಸಲಾಗುವುದು. ಪ್ರತಿಭಾಪುರಸ್ಕಾರ ಕಾರ್ಯಕ್ರಮವು ದಿನಾಂಕ 24.7.2016ರಂದು ನಡೆಯಲಿದೆ. ಪ್ರತಿಭಾ ಪುರಸ್ಕಾರಕ್ಕೆ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ಅರ್ಹತೆ ಆಧಾರದ ಮೇಲೆ ಸೀಮಿತಗೊಳಿಸುವ ಸಾಧ್ಯತೆ ಇದೆ.

**Statement of ownership and other particulars about Bruguvani Bangalore as required under Rule 8 of the Restration of Newspaper (Central) Rules, 1956**

FORM IV (See Rule 8)

| | | |
|---|---|---|
| Place of Publication | : | No. 11, Jeevan Buildings,<br>K.P. East, Bangalore - 560 001 |
| Periodicity of Publication | : | Quarterly |
| Printer's Name | : | P.S. Venkatesh Babu |
| Whether Citizen of India | : | Yes |
| Address | : | Omkar offset Printers<br>No,. 3, 1st Main Road, N.T. Pet<br>Bangalore - 560 002 |
| Publisher's Name | : | Smt. Geetha Vasudeva Rao<br>President, Ananda Balaga<br>Hotel Woodlands, Bangalore - 560 025 |
| Name & Address of Individual who own the newspaper and Partner or Shareholder holding more than one Percent of the Capital. | : | – |

Geetha V. Rao, hereby declare that the particulars given above are true to the best of my knowledge and belief.

Place : Bangalore

Date : 28.2.2016

# ಗಣೇಶೋತ್ಸವ – 11.9.2016



ಆನಂದ ಬಳಗದ ಯುವ ವಿಭಾಗದ ನೇತೃತ್ವದಲ್ಲಿ ದಿನಾಂಕ 11-9-2016ರ ಭಾನುವಾರದಂದು ಗಣೇಶೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

**ಕಾರ್ಯಕ್ರಮದ ವಿವರ**

| | |
|---|---|
| ಪೂರ್ವಾಹ್ನ 9.30 ಘಂಟೆಗೆ | : ಗಣಹೋಮ ಆರಂಭ |
| 11.30 ಘಂಟೆಗೆ | : ಪೂರ್ಣಾಹುತಿ |
| ಮಧ್ಯಾಹ್ನ 12.15 ಘಂಟೆಗೆ | : ಮಹಾ ಮಂಗಳಾರತಿ |
| ಅಪರಾಹ್ನ 1.00 ಘಂಟೆಗೆ | : ಪ್ರಸಾದ ಭೋಜನ |
| ಅಪರಾಹ್ನ 2.30 ಘಂಟೆಗೆ | : ಗಣೇಶ ವಿಸರ್ಜನೆ, ಸಭಾಗೃಹದ ಆವರಣದಲ್ಲಿ |

ಸ್ಥಳ : **ಆನಂದ ಸಭಾಗೃಹ,** ಬನ್ನೇರುಘಟ್ಟ ರಸ್ತೆ, ಬೆಂಗಳೂರು - 83

ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಮಹಾಗಣಪತಿಯ ಕೃಪೆಗೆ ಪಾತ್ರರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರಿಕೆ.

**ಗೀತಾ ವಾಸುದೇವರಾವ್**
ಅಧ್ಯಕ್ಷರು, ಆನಂದ ಬಳಗ

**ಎಸ್. ಹರಿದಾಸ್ ಉಪಾಧ್ಯ**
ಕಾರ್ಯದರ್ಶಿ, ಆನಂದ ಬಳಗ

**ಎಂ. ದಿನೇಶ್ ರಾವ್**
ಸಂಚಾಲಕರು, ಯುವ ವಿಭಾಗ

# ವ್ಯಾಸಂಗ ಸಹಾಯ ಯೋಜನೆ–ಅರ್ಜಿಗಳಿಗೆ ಆಹ್ವಾನ

ಆನಂದ ಬಳಗವು ಕೆಲವು ವರ್ಷಗಳ ಹಿಂದೆ ಕೆಲವು ಉದಾರ ಮನಸ್ಸಿನ ದಾನಿಗಳ ಸಹಕಾರದಿಂದ ಆರಂಭಿಸಿರುವ ವ್ಯಾಸಂಗ ಸಹಾಯ ಯೋಜನೆಯ ಲಾಭವನ್ನು ಬಳಗದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಈಗಾಗಲೇ ಪಡೆದಿರುತ್ತಾರೆ.

2016-17ನೇ ಸಾಲಿನಲ್ಲಿ ವೃತ್ತಿಪರ ಶಿಕ್ಷಣಕ್ಕೆ ಸೇರಬಯಸುವ ಆರ್ಥಿಕವಾಗಿ ದುರ್ಬಲರಾದ ಸದಸ್ಯರ ಪ್ರತಿಭಾವಂತ ಮಕ್ಕಳು ಈ ಯೋಜನೆಯ ಲಾಭವನ್ನು ಪಡೆಯಬಹುದಾಗಿದೆ. ಆಸಕ್ತಿಯುಳ್ಳ ಹಾಗೂ ಅರ್ಹಸದಸ್ಯರುಗಳು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :

**ಶ್ರೀ ಯಸ್.ಯನ್.ಶರತ್‌ಚಂದ್ರ**
ಸಂಚಾಲಕರು, ವ್ಯಾಸಂಗ ಸಹಾಯ ಯೋಜನೆ
ದೂರವಾಣಿ : 41138879/9886040271

ಆಸಕ್ತರು ದಿನಾಂಕ : 24.7.2016ರೊಳಗಾಗಿ ನೋಂದಾಯಿಸಬೇಕಾಗಿ ವಿನಂತಿ

# ಆನಂದ ಸಭಾಗೃಹ

**ಬನ್ನೇರುಘಟ್ಟ ರಸ್ತೆ, ಬೆಂಗಳೂರು**



## ಸಮಾರಂಭಗಳಿಗೆ ಸುಸಜ್ಜಿತವಾದ ಸಭಾಭವನ

**ಆನಂದ ಬಳಗ (ರಿ.) ಬೆಂಗಳೂರು ಇವರು ಆನಂದ ಬಳಗ ಚಾರಿಟೇಬಲ್ ಟ್ರಸ್ಟ್‌ನ ಸಹಯೋಗದೊಂದಿಗೆ ನಿರ್ಮಿಸಿದ ಆನಂದ ಸಭಾಗೃಹ ಇದೀಗ ಸಾರ್ವಜನಿಕ ಆಸಕ್ತರ ಉಪಯೋಗಕ್ಕಾಗಿ ಸುಸಜ್ಜಿತವಾಗಿ ರೂಪುಗೊಂಡಿದೆ.**

### ಸಭಾಗೃಹದ ವಿಶೇಷತೆಗಳು

- ಪ್ರಶಾಂತವಾದ ಪರಿಸರ, ಧಾರಾಳವಾದ ಪಾರ್ಕಿಂಗ್ ಜಾಗ
- ನಗರದ ಜಂಜಡಗಳಿಂದ ದೂರ; ಆದರೆ ಸಿಟಿಯ ಅನುಕೂಲಗಳಿಗೆ ಹತ್ತಿರ
- ಜಯದೇವ ಹೃದ್ರೋಗ ಆಸ್ಪತ್ರೆಯಿಂದ ಸುಮಾರು 15 ಕಿ.ಮೀ. ದೂರ.
- 750 ಜನರಿಗೆ ಆಸನ ವ್ಯವಸ್ಥೆಯುಳ್ಳ ಸಭಾಂಗಣ / ಕಲ್ಯಾಣ ಮಂಟಪ
- ವಿಸ್ತಾರವಾದ ವೇದಿಕೆ - ಎರಡು ಗ್ರೀನ್ ರೂಮುಗಳು
- ಸುಸಜ್ಜಿತವಾದ 10 ವಾಸ್ತವ್ಯ ಕೊಠಡಿಗಳು
- ಒಂದು ಸಾರಿ 300 ಜನರಿಗೆ ಅವಕಾಶವುಳ್ಳ ಭೋಜನ ಶಾಲೆ, ಡೈನಿಂಗ್ ಟೇಬಲ್, ಕುರ್ಚಿ ವ್ಯವಸ್ಥೆ
- ಆಧುನಿಕ ರೀತಿಯ ಅಡುಗೆ ಕೋಣೆ
- ವಿಫುಲವಾದ ನೀರಿನ ಲಭ್ಯತೆ, ಜನರೇಟರ್‌ನ ವ್ಯವಸ್ಥೆ

**ಮಾತ್ರವಲ್ಲ: ಬಾಡಿಗೆ ದರವೂ ಬಹಳಷ್ಟು ಕಡಿಮೆ**

**ಮುಂಗಡ ಕಾಯ್ದಿರಿಸಲು ಮತ್ತು ಹೆಚ್ಚುವರಿ ವಿವರಗಳಿಗೆ ಸಂಪರ್ಕಿಸಿ :**


**ಶ್ರೀ ನೀಲೇಶ್ ಶ್ಯಾನುಭೋಗ್**

**ಸಹ ವ್ಯವಸ್ಥಾಪಕರು, ಆನಂದ ಸಭಾಗೃಹ**

**ಸೈಟ್ ನಂ . 23, ಬನ್ನೇರು ಘಟ್ಟ ರಸ್ತೆ, ಬನ್ನೇರುಘಟ್ಟ ಗ್ರಾಮ ಪಂಚಾಯಿತಿ,**

**ಬೆಂಗಳೂರು – 560 083 ದೂರವಾಣಿ : 96630 35533**

# ಉಲ್ಲಾಸದ ವಸಂತೋತ್ಸವ

**ಮಾಸಾನಾಂ ಮಾರ್ಗಶೀರ್ಶೋಸ್ಮಿ ಋತೂನಾಂ ಕುಸುಮಾಕರಃ||** ಎಂದು ಗೀತೆಯಲ್ಲಿ ಉಕ್ತಿಯೊಂದು ಇದೆ. ಅಂದರೆ ಭಗವಂತನಿಗೆ ಅತೀ ಪ್ರಿಯವಾದ ಋತು ವಸಂತ. ಈ ಋತುವಿನಲ್ಲಿ ಭಗವಂತನ ಸಾನಿಧ್ಯ ಹೆಚ್ಚು ಇದ್ದು ಪ್ರತಿಯೊಂದು ಜೀವಿಯ ವಿಶೇಷ ಗುಣಗಳು ಶಕ್ತಿಗಳು ಪ್ರಸ್ತುತವಾಗುತ್ತವೆ ಎಂಬುವುದು ನಂಬಿಕೆ ಹಾಗೂ ಸತ್ಯ . ಅಂತೆಯೇ ನಮ್ಮ ಆನಂದ ಬಳಗದ ಪ್ರತೀ ವರ್ಷದ ಕಾರ್ಯಕ್ರಮಗಳ ಪ್ರಾರಂಭ ಕೂಡಾ ವಸಂತ ಮಾಸದಲ್ಲೇ! ವಸಂತೋತ್ಸವದ ಮೂಲಕ! ಬಳಗದ ಸದಸ್ಯರೆಲ್ಲರೂ ಸೇರಿ ದೇವರ ಸೃಷ್ಟಿಯ ಫಲಗಳನ್ನು ದೇವರಿಗೇ ಅರ್ಪಿಸಿ, ಕೃತಜ್ಞತೆಯನ್ನು ತೋರಿ, ಸ್ವಲ್ಪ ಮನರಂಜನೆಯಲ್ಲಿ ತೇಲಾಡಿ ದೇವರ ಪ್ರಸಾದವನ್ನು ಉಂಡು, ಆನಂದಿಸಿದ್ದು ಮೇ 29 ಭಾನುವಾರದಂದು. ನಮ್ಮದೇ ಆದ ಆನಂದ ಸಭಾಗೃಹದಲ್ಲಿ.

ಬಳಗದ ಸಾಂಸ್ಕೃತಿಕ ವಿಭಾಗವು ಧಾರ್ಮಿಕ ಹಾಗೂ ಯುವ ವಿಭಾಗದ ಜೊತೆಗೂಡಿ ಸಂಯೋಜಿಸಿದ ಈ ಕಾರ್ಯಕ್ರಮ ಸಂಜೆ ಸುಮಾರು 5 ಘಂಟೆಗೆ ಆರಂಭವಾಯಿತು. ಕಾರ್ಯಕ್ರಮದ ನಿರೂಪಕಿಯಾಗಿ ಶ್ರೀಮತಿ ಅಮಿತಾ ದಿನೇಶ್ ರಾವ್ ಅವರು ಬಳಗದ ವಿವಿಧ ಚಟುವಟಿಕೆಗಳ ಕಿರುಪರಿಚಯ ದೊಂದಿಗೆ, ವಸಂತೋತ್ಸವದ ಸಂಕ್ಷಿಪ್ತ ವಿವರಣೆ ನೀಡಿ ಅಂದಿನ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಸಿದ್ಧ ಕವಿ ಡಾ. ಎಚ್.ಎಸ್. ವೆಂಕಟೇಶ್ ಮೂರ್ತಿ ಯವರನ್ನೂ, ಬಳಗದ ಅಧ್ಯಕ್ಷೆಯಾದ ಶ್ರೀಮತಿ ಗೀತಾ ವಾಸುದೇವರಾವ್ ಅವರನ್ನೂ ವೇದಿಕೆಗೆ ಆತ್ಮೀಯವಾಗಿ ಬರಮಾಡಿಕೊಂಡರು. ಕುಮಾರಿ ದಿಶಾರಾವ್ ಅವರ ಸುಶ್ರಾವ್ಯ ದೇವತಾ ಪ್ರಾರ್ಥನೆಯ ಬಳಿಕ, ಸಾಂಸ್ಕೃತಿಕ ವಿಭಾಗದ ಸಂಚಾಲಕರಾದ ಶ್ರೀ ಹೆಚ್. ರಮೇಶ್ ಭಟ್ ಅವರು ಅತಿಥಿ, ಅಭ್ಯಾಗತರು, ಗಣ್ಯರು, ಸಭಿಕರೆಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು.

ಬಳಗದ ಸದಸ್ಯತ್ವ ಅಭಿವೃದ್ಧಿ ವಿಭಾಗದ ಸಂಚಾಲಕರಾದ ಶ್ರೀ ಎಂ.ಕೆ. ಗುರುಮೂರ್ತಿಯವರು ಮುಖ್ಯ ಅತಿಥಿಗಳ ಪರಿಚಯ ಮಾಡುತ್ತಾ, ಸಾಹಿತ್ಯ ಕ್ಷೇತ್ರಕ್ಕೆ ಅವರಿಂದಾದ ಅಪಾರ ಸೇವೆ, ಅಮೂಲ್ಯ ಕೊಡುಗೆ. ಮೇಲಾಗಿ ಅವರ ಸರಳ, ಸ್ನೇಹಮಯ ವ್ಯಕ್ತಿತ್ವದ ಬಗ್ಗೆ ವಿವರಿಸಿದರು. ಡಾ. ಹೆಚ್. ಎಸ್. ವಿ. ಯವರು ತಮ್ಮ ಭಾಷಣದಲ್ಲಿ, ವಸಂತ ಋತುವಿಗೆ ಸಂಬಂಧ ಪಟ್ಟ ಪ್ರಕೃತಿ, ಸಾಹಿತ್ಯ, ಸಂಸ್ಕೃತಿ, ಸಮಾಜ, ಸಂದರ್ಭಗಳ ಕೆಲವು ಸೂಕ್ಷ್ಮತೆಗಳನ್ನು ಹಾಗೂ ಕೆಲವು ವಿಶೇಷತೆಗಳನ್ನೂ ಎಲ್ಲರ ಮನ ಮುಟ್ಟುವಂತೆ ವಿವರಿಸಿದರು. ಯಾವುದೇ ವಿಷಯ ವಿಚಾರಗಳಿರಲಿ, ಅದನ್ನು ಸರಳವಾಗಿ ಹಾಗೂ ರಸವತ್ತಾಗಿ ವಿವರಿಸುವ ಅವರ ಮಾತಿನ ಚತುರತೆಗೆ ಮತ್ತು ವೈಚಾರಿಕ



*ಕವಿ ಹೆಚ್.ಎಸ್.ವಿ. ಅವರಿಗೆ ಅಧ್ಯಕ್ಷರಿಂದ ಗೌರವಾರ್ಪಣೆ.....*

ಹಿರಿತನಕ್ಕೆ ತಮ್ಮ ಮೆಚ್ಚುಗೆಯನ್ನು ಸಭಿಕರು ಸುದೀರ್ಘ ಕರತಾಡನದ ಮೂಲಕ ವ್ಯಕ್ತಪಡಿಸಿದರು.

ಆನಂದಬಳಗದ ಅಧ್ಯಕ್ಷೆಯಾಗಿ ವರ್ಷದ ಮೊಟ್ಟಮೊದಲ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶ್ರೀಮತಿ ಗೀತಾ ವಾಸುದೇವರಾವ್ ಅವರು ಬಳಗದ ಸದುದ್ದೇಶ, ಸತ್ಕಾರ್ಯಗಳ ಸೂಕ್ಷ್ಮ ಪ್ರಸ್ತಾವದೊಂದಿಗೆ, ಎಲ್ಲವೂ ''ಕೆರೆಯ ನೀರನು ಕೆರೆಗೆ ಚೆಲ್ಲುವೆ'' ಸಮರ್ಪಣಾ ಭಾವದಿಂದ ತುಂಬಿರಬೇಕೆಂಬ ಸಂದೇಶವನ್ನು ಬೀರಿದರು. ಹಾಗೂ ನಮ್ಮ ಬದುಕಿನಲ್ಲಿ ಸುಸಂಸ್ಕೃತಿ ಮತ್ತು ಒಳ್ಳೆಯ ಮೌಲ್ಯಗಳನ್ನು ಉಳಿಸಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದರು. ಮುಖ್ಯ ಅತಿಥಿಗಳನ್ನು ಬಳಗದ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸಾಂಸ್ಕೃತಿಕ ವಿಭಾಗದ ಸಂಚಾಲಕರು ಆದರ ಪೂರ್ವಕವಾಗಿ ಗೌರವಿಸಿದ ನಂತರ, ಶ್ರೀ ಹರಿದಾಸ ಉಪಾಧ್ಯ ಅವರು ಎಲ್ಲರಿಗೂ ಹೃತ್ಪೂರ್ವಕ ವಂದನೆಯನ್ನು ಸಲ್ಲಿಸಿದರು.



*ಕಲ್ಪಂಜೆ ಸಹೋದರಿಯರ ನೃತ್ಯದ ಮೋಡಿ......*



*ಮಹಾ ಪೂಜೆಯ ಸಡಗರ*

ಬಳಿಕ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಲ್ಮಂಜೆ ಸಹೋದರಿಯರು ಎಂದು ಪ್ರಸಿದ್ಧರಾಗುತ್ತಿರುವ ಬಳಗದ ಯುವ ಪ್ರತಿಭೆಗಳಾದ ಕುಮಾರಿ ವಿಶ್ರುತಿ ಮತ್ತು ಕುಮಾರಿ ವಾಗ್ದೇವಿ, ವಸಂತ ಋತುವಿನ ರಸಾಭಿನಯ ಹಾಗೂ ಶ್ರೀಕೃಷ್ಣನ ವಿವಿಧ ಗುಣಗಳ ವರ್ಣನೆಯನ್ನು ಭರತನಾಟ್ಯ ಮತ್ತು ಕಥಕ್ ಶೈಲಿಯ ಮಿಶ್ರ ಮಾದರಿಯಲ್ಲಿ ನೃತ್ಯಮುಖೇನ ಪ್ರದರ್ಶಿಸಿ ಸಭಿಕರನ್ನು ರಂಜಿಸಿದರೆ, ಕುಮಾರಿ ಸಹನಾ, ಮೇಘನಾ, ಶ್ರೀಲಕ್ಷ್ಮಿ ಬೆಳ್ಮಣ್ಣು ಮತ್ತು ಮಾಸ್ಟರ್ ಆದಿತ್ಯ ಕೆದಿಲಾಯ ತಮ್ಮ ಸುಶ್ರಾವ್ಯ ಗಾಯನದಿಂದ ಎಲ್ಲರ ಮನ ತಣಿಸಿದರು. ಬಳಗದ ಸಾರ್ವಜನಿಕ ಸಂಪರ್ಕ ವಿಭಾಗದ ಸಂಚಾಲಕರಾದ ಶ್ರೀ ಜಯಂತ್ ರಾವ್ ಅವರ ಮುಂದಾಳುತನದಲ್ಲಿ ಶ್ರೀಕೃಷ್ಣದೇವರ ಪೂಜೆ ಭಕ್ತಿಪೂರ್ವಕ ವಾಗಿ ಸಂಭ್ರಮದಿಂದ ನಡೆಯಿತು. ಪೂಜೆಯ ನಂತರ ಎಂದಿನಂತೆ ವಸಂತೋತ್ಸವದ ವಿಶೇಷ ಪಲಾಹಾರದ ವ್ಯವಸ್ಥೆಯನ್ನು ಶ್ರೀ ವೆಂಕಟರಾಜ್ ಭಟ್ ಅವರ ಸಹಯೋಗ ದಲ್ಲಿ ಅಚ್ಚುಕಟ್ಟಾಗಿ ಏರ್ಪಡಿಸಲಾಗಿತ್ತು .

ವರ್ಷದ ಈ ಮೊದಲ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲು ಕಾರಣೀಕರ್ತರಾದ ಸಾಂಸ್ಕೃತಿಕ ವಿಭಾಗ, ಯುವ ವಿಭಾಗ ಮತ್ತು ಧಾರ್ಮಿಕ ವಿಭಾಗದ ಎಲ್ಲರೂ ಶ್ಲಾಘನೀಯರು.


# Farmland Project

## *At back water of KRS, Near Mysore.*

- Min buy 2gunta (2178 SFT) / 5 Gunta (5445 SFT)
- Ideal location for a Farmhouse and will never run shortage of Water.
- Organic Farming assistance, 24x7 security,& construction support if req.
- 15Kms from Mysore, clear legal title with report.
- Back water of KRS, a panoramic view
- KLR act amended in Sept 15, as non agriculturist can also buy the land.
- Loan / Installment facility available.
- An exclusive Brahmins Project, initiated by a Vedic Scholar.

*For more information please*
email: ullas.bhide@gmail.com

*For telephonic enquiry:*
**Ullas Bhat Bhide : 9845641876**
**Nayana Bhat Bhide : 9980335403**

## ಜುಲೈ-ಅಕ್ಟೋಬರ್ 2016 ಅವಧಿಯ ವಿಶೇಷ ದಿನಗಳು

| | | |
|---|---|---|
| 15.07.2016 | ಶುಕ್ರ | ಸರ್ವೈಕಾದಶೀ, ತಪ್ತಮುದ್ರಾಧಾರಣ |
| 16.07.2016 | ಶನಿ | ಕರ್ನಾಟಕ ಸಂಕ್ರಮಣ ಶಾಕವ್ರತಾರಂಭ |
| 19.07.2016 | ಮಂಗಳ | ಹುಣ್ಣಿಮೆ |
| 24.07.2016 | ಮಂಗಳ | ಆನಂದ ಬಳಗ - ಪ್ರತಿಭಾ ಮೇಳ |
| 30.07.2016 | ಶನಿ | ಸರ್ವೈಕಾದಶೀ |
| 02.08.2016 | ಮಂಗಳ | ಅಮಾವಾಸ್ಯೆ (ಭೀಮನ ಅಮಾವಾಸ್ಯೆ) |
| 03.08.2016 | ಬುಧ | ಶ್ರಾವಣ ಮಾಸ, ವರ್ಷ ಋತು ಆರಂಭ |
| 07.08.2016 | ಭಾನು | ನಾಗರ ಪಂಚಮಿ |
| 12.08.2016 | ಶುಕ್ರ | ವರಮಹಾಲಕ್ಷ್ಮಿ ವ್ರತ |
| 14.08.2016 | ಭಾನು | ಸರ್ವೈಕಾದಶೀ |
| 15.08.2016 | ಸೋಮ | ದಧಿ ವ್ರತಾರಂಭ, ಆನಂದ ಬಳಗ - ದುರ್ಗಾ ನಮಸ್ಕಾರ |
| 16.08.2016 | ಮಂಗಳ | ಸಿಂಹ ಸಂಕ್ರಮಣ |
| 18.08.2016 | ಗುರು | ಹುಣ್ಣಿಮೆ, ಯಜುರುಪಾಕರ್ಮ |
| 20.08.2016 | ಶನಿ | ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನೆ |
| 24.08.2016 | ಬುಧ | ಶ್ರೀ ಕೃಷ್ಣ ಜನ್ಮಾಷ್ಟಮಿ |
| 25.08.2016 | ಗುರು | ಶ್ರೀ ಕೃಷ್ಣ ಲೀಲೋತ್ಸವ |
| 28.08.2016 | ಭಾನು | ಸರ್ವೈಕಾದಶೀ |
| 01.09.2016 | ಗುರು | ಅಮಾವಾಸ್ಯೆ |
| 02.09.2016 | ಶುಕ್ರ | ಭಾದ್ರಪದ ಮಾಸಾರಂಭ |
| 04.09.2016 | ಭಾನು | ಗೌರೀ ತೃತೀಯಾ, ಸಾಮೋಪಾಕರ್ಮ |
| 05.09.2016 | ಸೋಮ | ಗಣೇಶ ಚತುರ್ಥಿ |
| 11.09.2016 | ಭಾನು | ಆನಂದ ಬಳಗ - ಗಣೇಶೋತ್ಸವ |
| 13.09.2016 | ಮಂಗಳ | ಸರ್ವೈಕಾದಶೀ |
| 14.09.2016 | ಬುಧ | ಸೌರ ಋಗುಪಾಕರ್ಮ, ಕ್ಷೀರವ್ರತಾರಂಭ |
| 15.09.2016 | ಗುರು | ಅನಂತ ಚತುರ್ದಶೀ |
| 16.09.2016 | ಶುಕ್ರ | ಹುಣ್ಣಿಮೆ, ಕನ್ಯಾ ಸಂಕ್ರಮಣ |
| 18.09.2016 | ಭಾನು | ಆನಂದ ಬಳಗ - ವಾರ್ಷಿಕ ಮಹಾಸಭೆ |
| 26.09.2016 | ಸೋಮ | ಸರ್ವೈಕಾದಶಿ |
| 30.09.2016 | ಶುಕ್ರ | ಮಹಾಲಯ ಅಮಾವಾಸ್ಯೆ |
| 01.10.2016 | ಶುಕ್ರ | ನವರಾತ್ರಿ ಆರಂಭ |
| 10.10.2016 | ಸೋಮ | ಮಹಾ ನವಮೀ |
| 11.10.2016 | ಮಂಗಳ | ವಿಜಯದಶಮೀ |
| 12.10.2016 | ಬುಧ | ಸರ್ವೈಕಾದಶೀ |
| 13.10.2016 | ಗುರು | ದ್ವಿದಳ ವ್ರತಾರಂಭ |
| 16.10.2016 | ಭಾನು | ಹುಣ್ಣಿಮೆ, ವಾಲ್ಮೀಕಿ ಜಯಂತಿ |

**(ಆಧಾರ : ಪರ್ಯಾಯ ಉಡುಪಿ ಶ್ರೀ ಪೂರ್ಣಪ್ರಜ್ಞ ಪಂಚಾಂಗಂ)**

# ನಾಲಾಯಕು

ಶಿವಣ್ಣನ ತಮ್ಮ ರಾಜಣ್ಣ
ಆತ ಸದಾ ಖಿನ್ನಮನಸ್ಕ ಕಣಣ್ಣ
ಎಲ್ಲರೂ ಚೆನ್ನಾಗಿದ್ದಾರೆ ನಾನು ಮಾತ್ರ ನಾಲಾಯಕು
ತನ್ನಿಂದ ಏನೂ ಉಪಯೋಗವಿಲ್ಲವೆಂಬ ಕೊರಗು ॥1॥

ಇದನು ಗಮನಿಸಿದ ಮಿತ್ರ ರಾಮಣ್ಣ
ಈ ಖಿನ್ನತೆಗೆ ಕೊನೆ ಹಾಡಲೇ ಬೇಕೆಂದ ಅಣ್ಣ
ರಾಜಣ್ಣನ ಕಂಡು ಮಾತಾಡಿಸಿದ ಆತ್ಮೀಯತೆಯಿಂದ
ರಾಜಣ್ಣ ಆಲಿಸಿದ ಅತಿ ತನ್ಮಯತೆಯಿಂದ ॥2॥

ರೂ. ಐವತ್ತಕ್ಕೆ ನಿನ್ನ ಕಿರಿಬೆರಳ ನನಗೆ ಕೊಡುವೆಯಾ
ಒಲ್ಲೆನೆಂದ ಈ ನಮ್ಮ-ನಿಮ್ಮ ಗೆಳೆಯ
ಮೊತ್ತವ ಐನೂರಕ್ಕೇರಿಸಿದ ರಾಮಣ್ಣ
ಆದರೂ 'ಊಹುಂ' ಎಂದ ರಾಜಣ್ಣ ॥3॥

ಐದು ಸಾವಿರ, ಐವತ್ತು ಸಾವಿರವಾಯಿತು ಈ ಮೊತ್ತ
ಒಪ್ಪಿಗೆಯ ಕ್ಷಣ ಮಾತ್ರ ಬರಲಿಲ್ಲ ಇತ್ತ
ರಾಮಣ್ಣನೆಂದ, ನೋಡು ತಮ್ಮಾ
ನಿನ್ನ ಮೌಲ್ಯವನೀಗ ಲೆಕ್ಕಿಸೋಣ ತಮ್ಮಾ ॥4॥

ನಿನಗಿವೆ ಕೈಬೆರಳು ಹತ್ತು
ಜೊತೆಗೆ ಕಾಲ್ಬೆರಳು ಇನ್ನೂ ಹತ್ತು
ಕೈಗಳೆರಡು, ಕಾಲುಗಳೆರಡು, ಕಿವಿ ಇನ್ನೆರಡು
ಹಸ್ತಪಾದಗಳೆರಡೆರಡು, ಸುಂದರ ಕಣ್ಣು ಅವೆರಡು ॥5॥

ಅಷ್ಟೇ ಅಲ್ಲ, ಇನ್ನು ನಿನ್ನ ಒಳಾಂಗಗಳು
ಸದ್ದಿಲ್ಲದೆ ಸದಾ ದುಡಿಯುವ ಮೂತ್ರಕೋಶಗಳು
ಪುಪ್ಪುಸ, ಜೊತೆಗೆ ಕಾರ್ಯಶೀಲ ಹೃದಯ
ಇವೆಲ್ಲವ ಗೆಳೆಯಾ ನೀ ಮರೆತೆಯಾ? ॥6॥

ಇದಕೆ ಸೇರಿಸಿಕೋ ಜೀರ್ಣಾಂಗಗಳ ಲೆಕ್ಕಾಚಾರ
ಮಿದುಳು ನರವ್ಯೂಹ ಮುಂತಾದವುಗಳ ವಿಚಾರ
ಇವೆಲ್ಲದರ ಮೌಲ್ಯಗಳ ಮೊತ್ತ ಎಷ್ಟಾಗಬಹುದು
ಇದರ ಊಹಿಸಿದರೆ ಹೇಳುವೆ ನೀ ಅಹುದಹುದು ॥7॥

ನೀನು ಅದೆಷ್ಟು ಅದೃಷ್ಟವಂತ
ನಿನಗರಿವಿದೆಯೇ ಅತಿಭಾಗ್ಯವಂತ
ದೈವ ನೀಡಿದ ಅಪರಿಮಿತಗಳ ಕಂಡು
ಆಗು ನೀ ಅನಿಕೇತನ, ಭಾಗ್ಯದಿ ಮಿಂದು ॥8॥

ಪಡಬೇಡ ತಮ್ಮ ಯಾವುದೇ ದಿಗಿಲು
ನಿನ್ನಯ ಮೌಲ್ಯ ಕೋಟಿಕೋಟಿಗೂ ಮಿಗಿಲು
ಹೇಳದಿರು ನೀ ನಾ ನಾಲಾಯಕೆಂದು
ಹೇಳು ನೀ ನಾ ಲಾಯಕೆಂದು ॥9॥

ಆದ್ದರಿಂದ ಚಿಂತೆ ಬಿಡು ಖಿನ್ನತೆ ಬಿಡು
ಅಸಹಾಯಕತೆ ಕಳವಳ ಬಿಟ್ಟೇಬಿಡು
ಸಂತೋಷಪಡು ಖುಷಿಪಡು
ಜೀವನದ ಸೊಗಸ ಕಂಡು ಆನಂದ ಪಡು ॥10॥

**ಡಾ॥ ಶ್ರೀ ವೆಂಕಟರಮಣ, ತಲಪಾಡಿ**

With Best Compliments From :

**FOR DAKSHINA KARNATAKA**
**BRAHMIN COMMUNITY**

**GLOBAL INTRERACTIVE MATRIMONIAL WEBSITE**

LOG ON TO www.dkbmatrimony.com

WITH FEATURES LIKE

PHOTO & HOROSCOPE UPLOADING
AND HOROSCOPE MATCHING

Contact :
**Manjunath Bhat**
(M) 09822114009,
Pune

With Best Compliments From :

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

Start the day feeling .....



.......Light & comfortable

Non Habit forming

***For sure relief from***

# CONSTIPATION

***use...***




**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.

With best compliments from the manufacturers of:

**Anuloma®**
DS Tab and Churna

For Safe and Sure relief from Constipation





BPRL Since 1950

**SAGAR PHARMACEUTICALS**
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in




# Get a Website in 4 HOURS

**Get a responsive site complete with pictures, content, design and CMS right now!**

Express Website @

**₹5999/-***

(Including tax)

**You have a GREAT BUSINESS, You deserve a GREAT WEBSITE**

webbazaar®

GET ONLINE. GET NOTICED

# +91-9741129439

**Corporate Office :**

**eMarket Web Technologies Pvt Ltd.**
First Floor, RR Chambers, No. 2, 11th Main Road,
Vasanth Nagar, Bangalore - 560052
Email : express@webbazaar.com
Call : +91 7411 000 403 | 080-6999 6666
Website : www.webbazaar.com

**Sub-Distributor :**

**Smart Byte Services**
Contact Person : Mr.Ballal
Email : ballal@smartbyte.in


* Subsequent subscription renewal @ ₹2999/- including tax * Conditions apply. Pay as you use for addons.

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು

ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments*

# Mr. B.G.Bairy

*Managing Director*

*Bayir Group of Companies*

Bayir Chemicals | Bayir Extracts Pvt. Ltd. | Beloorbayir Biotech Ltd. | Sneha Natura




*Future with Nature*

## Makers of Quality based herbal formulations

SAGUN CAPSULE : Anti Arthritic
HEPBAC Capsule : Liver corrective
NUTRIHERB Capsule :For general debility
ARSHACARE Capsule: For Ano-rectal care
LAXSEN Capsule : Safe Laxative
MEDHYN Capsule : Stress reliever
AYUGINEE Tablet: Natural cartilage protective
SAGUN Liniment : Topical Analgesic
HEPBAC Syrup : Ideal Appetizer
BYEKOF Syrup :Effective cough remedy
MEDHYN Syrup: Memory enhancer

## Other Therapeutic formulations

GINEE Tablet : For Osteo Arthritis | BYCAL Tablet : Richest Calcium
BYNAC Tablet :Analgesic & Anti pyretic | BYFOL Tablet: For Folate deficiency

*For more details, contact :*

**SNEHA NATURA, A unit of Bayir Group, Corporate Office,**
**No. 92/1/1, PVR Towers, Katriguppa Main Road, Bangalore- 85**
**INDIA**
**Ph : 91-80-26798464, 91-80-43489900 upto 99, Fax : 91-80- 26890518**
**E-mail: bayirche@gmail.com**
**WEB: www.bayirextracts.com**



‘ ನನ್ನ ಬ್ಯಾಂಕ್ ಖಾತೆ ನನಗೆ ಬೇಕಾದಂತೆ ’
ಕೆಬಿಎಲ್
ವನಿತಾ
ಮಹಿಳೆಯರಿಗಾಗಿ ಉಳಿತಾಯ ಖಾತೆ
ಕೆಬಿಎಲ್ ವನಿತಾ ಹೊಸ ಉಳಿತಾಯ ಖಾತಾ ಸೌಲಭ್ಯವನ್ನು ವಿಶೇಷವಾಗಿ ಮಹಿಳೆಯರಿಗಾಗಿಯೇ ಪ್ರಸ್ತುತ ಪಡಿಸಲು ಹೆಮ್ಮೆಪಡುತ್ತಿದ್ದೇವೆ. ಹಲವಾರು ಸೌಲಭ್ಯಗಳನ್ನು ಹೊಂದಿರುವ ಇದು ಎಲ್ಲಿ, ಯಾವಾಗಲಾದರೂ ಬ್ಯಾಂಕಿಂಗ್ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ನೆರವಾಗುತ್ತದೆ.
ವಿಶೇಷ ಸೌಲಭ್ಯಗಳು *
• ಕನಿಷ್ಠ ಉಳಿಕೆ ಇರಬೇಕೆಂದಿಲ್ಲ
• ಉಚಿತ ಮನಿಪ್ಲಾಂಟ್-ಅಂತಾರಾಷ್ಟ್ರೀಯ ವೀಸಾ ಡೆಬಿಟ್ ಕಾರ್ಡ್
• ಉಚಿತ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯ
• ಉಚಿತ ಎಸ್‌ಎಂಎಸ್
• ಬಹುಶಾಖಾ ಸೌಲಭ್ಯ
• ಉಚಿತವಾಗಿ ಹಣ ವರ್ಗಾವಣೆ
ಉಚಿತ
₹50,000* ವರೆಗೆ
ಚಿನ್ನಾಭರಣಗಳ
ಮೇಲೆ ವಿಮೆ
ಸರಳ ಬ್ಯಾಂಕಿಂಗ್‌ಗಾಗಿ ಕೆಬಿಎಲ್ ವನಿತಾ ಉಳಿತಾಯ ಖಾತೆ ಇಂದೇ ತೆರೆಯಿರಿ.
ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ
ಕರ್ಣಾಟಕ ಬ್ಯಾಂಕ್ ಲಿ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು – 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking***
***Party Halls and All facilities***

No. 22/A, Mahatma Gandhi Road, Bangalore-560 001
Phone : 25584321    Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for***
***Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in



# ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

**Services Offered :**

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking

**For**

- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:
MR. DINESH RAO MUNDRUPPADY MOB: 99456 88955
MR. VASUDEVAN T S MOB: 98450 26743




this picture is an actual view from the site


## HIGHLIGHTS OF THE PROJECT

- Plots of 6 cents and above
- Serene, green and non polluted environment
- Located in the picturesque setting of Mangalore City
- Underground drainage network
- Well paved and formed roads of 30 feet width with rigid paving
- Engineered rain water drains and culverts across the entire layout
- Street lighting along all roads
- Club house, walking path.
- Gated community with round-the-clock security.
- Drinking water network pipeline laid along all roads
- Large Natural Lakeside park and open space
- Layout approved by the Mangalore Urban Development Authority

## LOCATION MAP




## THE LAYOUT



| | |
|---|---|
| TWIN HOUSE | Extent 9.45 cents |
| VILLA TYPE - A | Extent 9.20 cents |
| VILLA TYPE - B | Extent 12.15 cents |
| VILLA TYPE - C | Extent 10.10 cents |

1 cent : 435.56 sq.ft.

## Konchady, Off Airport Road, Mangalore.

3.3 kms from Nanthoor junction
3.5 kms from KSRTC Bus Stand
2 kms from A.J. Hospital

Nishka
LUXURY HOMES

For Booking contact: 98455 37500 / 94959 85879

visit us at : http://www.nishkaproperties.com/

# ಬಳಗದ ವ್ಯಾಸಂಗ ಸಹಾಯ ಯೋಜನೆ

ನಮ್ಮ ಸಮಾಜದಲ್ಲಿರುವ ಪ್ರತಿಭಾವಂತ ವಿದ್ಯಾರ್ಥಿಗಳು, ಆರ್ಥಿಕ ಅನಾನುಕೂಲತೆಯಿಂದಾಗಿ ವೃತ್ತಿ ಪರ ಉನ್ನತ ಶಿಕ್ಷಣವನ್ನು ಪಡೆಯುವುದರಿಂದ ವಂಚಿತರಾಗಬಾರದು ಎಂಬ ಮೂಲ ಉದ್ದೇಶದಿಂದ ಆನಂದ ಬಳಗವು 2001ನೇ ಇಸವಿಯಲ್ಲಿ ಪ್ರಾರಂಭಿಸಿರುವ ವ್ಯಾಸಂಗ ಸಹಾಯ ಯೋಜನೆ ಕಳೆದ 15 ವರ್ಷಗಳಿಂದ ಸರಾಗವಾಗಿ ಮುಂದುವರಿದುಕೊಂಡು ಬಂದಿದೆ.

ಈ ಮಹತ್ವದ ಯೋಜನೆಯನ್ನು ಕ್ರಮ ಬದ್ಧವಾಗಿ ಅನುಷ್ಠಾನಗೊಳಿಸುವ ಇರಾದೆಯಿಂದ ಪ್ರತ್ಯೇಕವಾದ ವ್ಯಾಸಂಗ ಸಹಾಯ ಯೋಜನೆ ಸಮಿತಿಯೊಂದನ್ನು ರಚಿಸಲಾಗಿದ್ದು, ಕಳೆದ ಕೆಲವು ವರ್ಷಗಳಿಂದ ಶ್ರೀ ಯು.ವಿ. ಕೃಷ್ಣಮೂರ್ತಿ, ಶ್ರೀ ಎಸ್. ಎನ್. ಶರತ್ ಚಂದ್ರರವರು ಈ ಸಮಿತಿಯ ಸಂಚಾಲಕ ರಾಗಿ ಸಮರ್ಥವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆನಂದ ಬಳಗದಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ಬಳಗದ ಸರ್ವತೋಮುಖ ಏಳಿಗೆಗೆ ಕಾರಣಕರ್ತರಾಗಿದ್ದ ದಿವಂಗತ ಡಾ.ಪಿ.ಜೆ.ಬಾಗಿಲ್ತಾಯರವರು ಈ ಯೋಜನೆಯ ಪ್ರಾರಂಭ ಮತ್ತು ಅನುಷ್ಠಾನಗಳಿಗೆ ಅತೀವ ಆಸಕ್ತಿ ವಹಿಸಿದ್ದು. ಅವರಂತಹ ಅನೇಕ ಉದಾರಿಗಳ ದೋಣಿಯಿಂದಾಗಿ ವ್ಯಾಸಂಗ ಸಹಾಯ ಯೋಜನೆ ಯಶಸ್ವಿಯಾಗಿ ಕಾರ್ಯಗತವಾಗಲು ಸಾಧ್ಯವಾಗಿದೆ.

ಈ ಯೋಜನೆಯನ್ವಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್, ವೈದ್ಯಕೀಯ ಅಥವಾ ಇತರ ಯಾವುದೇ ಉನ್ನತ ಶಿಕ್ಷಣವನ್ನು ಪಡೆಯಲು ವಾರ್ಷಿಕವಾಗಿ ಗರಿಷ್ಠ 30 ಸಾವಿರ ರೂ.ಗಳವರೆಗೆ ಸಹಾಯ ನೀಡಲಾಗುತ್ತಿದೆ. ಹೀಗೆ ಸಾಲದ ಸಹಾಯ ಪಡೆದವರು ಓದು ಮುಗಿಸಿ, ಸಂಪಾದನೆ ಆರಂಭಿಸಿ ದಾಗ, ತಾವು ಪಡೆದ ಮೊತ್ತವನ್ನು ಬಳಗಕ್ಕೆ ಹಿಂದಿರುಗಿಸುವುದು ಕಡ್ಡಾಯವಾಗಿದೆ. ಆದರೆ ಅನೇಕ ವಿದ್ಯಾರ್ಥಿಗಳು, ಪಡೆದ ಸಾಲದ ಮೊತ್ತದ ಜೊತೆಗೆ ಮತ್ತಷ್ಟು ಹಣವನ್ನು ಸೇರಿಸಿ, ತಮ್ಮ ದೇಣಿಗೆಯನ್ನಾಗಿ ಬಳಗಕ್ಕೆ ನೀಡುತ್ತಿರುವುದು ಸ್ವಾಗತಾರ್ಹ ವಿಚಾರ.

ಬಳಗದ ಅನೇಕ ಉದಾರಿಗಳ ಧಾರಾಳ ಮನಸ್ಸಿನ ದೇಣಿಗೆಯಿಂದಾಗಿ ಈ ಯೋಜನೆಯ ಲೆಕ್ಕದಲ್ಲಿ ಇದೀಗ ರೂ. 50 ಲಕ್ಷಗಳನ್ನು ಸಂಗ್ರಹಿಸಲು ಸಾಧ್ಯವಾಗಿದೆ. ಬಳಗದ ರಜತ ಮಹೋತ್ಸವ ಸಂದರ್ಭದಲ್ಲಿ ಶ್ರೀಮತಿ ಬಿ.ಜಿ. ಕೃಷ್ಣವೇಣಿ ಎಜುಕೇಶನ್ ಫಂಡ್ ಹೆಸರಿನಲ್ಲಿ ದೇಣಿಗೆ ನೀಡಿದ ರೂ. 5 ಲಕ್ಷಗಳು ಹಾಗೂ ಶ್ರೀ ಪಿ.ಎಸ್. ಬಾಗಿಲ್ತಾಯರ ನೇತೃತ್ವದ 2012-2016ರ ಕಾರ್ಯಕಾರಿ ಸಮಿತಿಯ ಸದಸ್ಯರು ನೀಡಿರುವ ವಂತಿಗೆಯಾಗಿ ರೂ. 5.29 ಲಕ್ಷ ರೂ.ಗಳು ಕೂಡಾ ವ್ಯಾಸಂಗ ಸಹಾಯ ಯೋಜನೆಗೆ ಸೇರ್ಪಡೆಯಾಗಿದೆ.

ಈ ಯೋಜನೆಯ ಆರ್ಥಿಕ ವ್ಯವಹಾರಕ್ಕಾಗಿ ಪ್ರತ್ಯೇಕವಾದ ಬ್ಯಾಂಕ್ ಖಾತೆಯನ್ನು ತೆರೆದಿದ್ದು, ಸಂಗ್ರಹಿಸಲಾದ ಮೊತ್ತದ ವಿವರ ಈ ರೀತಿ ಇದೆ :

| | | | |
|---|---|---|---|
| 1. | ಪ್ರಾರಂಭದಿಂದ 2000ನೇ ಸಾಲಿನವರೆಗೆ ಸಂಗ್ರಹವಾದ ಮೊತ್ತ | ರೂ. | 19.29 ಲಕ್ಷ |
| 2. | 2000ದಿಂದ 31.3.2016ರವರೆಗೆ ದಾನಿಗಳಿಂದ ಸಂಗ್ರಹಿಸಿರುವ ಮೊತ್ತ | ರೂ. | 21.09 ಲಕ್ಷ |
| 3. | ರಜತೋತ್ಸವ ಸಮಾರಂಭದ ಸಂದರ್ಭದಲ್ಲಿ ದೇಣಿಗೆ | ರೂ. | 5.00 ಲಕ್ಷ |
| 4. | 2012-2016 ಸಾಲಿನ ಕಾರ್ಯಕಾರಿ ಸಮಿತಿಯ ದೇಣಿಗೆ | ರೂ. | 5.29 ಲಕ್ಷ |
| | **ಒಟ್ಟು** | **ರೂ.** | **50.67 ಲಕ್ಷ** |

ಇದುವರೆಗೆ ಯೋಜನೆಯ ಪ್ರಯೋಜನವನ್ನು ಪಡೆದ ವಿದ್ಯಾರ್ಥಿಗಳು ಹಾಗೂ ವಿನಿಯೋಗಿಸಲಾದ ಮೊತ್ತದ ವಿವರ ಇಂತಿದೆ:

| ಕ್ರ.ಸಂ. | ವಿವರ | ವಿದ್ಯಾರ್ಥಿಗಳ ಸಂಖ್ಯೆ | ಮೊತ್ತ (ಲಕ್ಷ.ರೂ) |
|---|---|---|---|
| 1. | ವಿತರಿಸಲಾದ ಮೊತ್ತ | 47 | 34.20 |
| 2. | ವ್ಯಾಸಂಗ ಮುಕ್ತಾಯ ಮಾಡಿದವರು | 32 | 22.80 |
| 3. | ಸಾಲವನ್ನು ಪೂರ್ತಿಯಾಗಿ ಮರುಪಾವತಿ ಮಾಡಿದವರು | 22 | 13.30 |
| 4. | ಮರುಪಾವತಿ ಪ್ರಾರಂಭವಾಗಿರುವುದು | 10 | 5.38 |
| 5. | ವ್ಯಾಸಂಗ ಮುಂದುವರಿಸುತ್ತಿರುವವರು | 15 | 11.40 |

ಯೋಜನೆಯ 47 ಫಲಾನುಭವಿಗಳ ಪೈಕಿ ಇಬ್ಬರು ವೈದ್ಯಕೀಯ, ಒಬ್ಬರು ದಂತ ವೈದ್ಯಕೀಯ, 42 ಇಂಜಿನಿಯರಿಂಗ್, ತಲಾ ಒಬ್ಬರು ಡಿಪ್ಲೋಮಾ ಹಾಗೂ ಬಿ.ಸಿ.ಎ. ಶಿಕ್ಷಣಕ್ಕಾಗಿ ಮೊತ್ತವನ್ನು ಪಡೆದಿರುತ್ತಾರೆ.

ಈ ವ್ಯಾಸಂಗ ಸಹಾಯ ಯೋಜನೆಯ ನಿಧಿಯನ್ನು ವೃದ್ಧಿಸಿ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ನೆರವನ್ನು ನೀಡ ಬೇಕೆಂದು ಬಳಗದ ಸದಾಶಯ. ಇದಕ್ಕಾಗಿ ಸದಸ್ಯ ಮಹನೀಯರು ಸಕಾರಾತ್ಮಕವಾಗಿ ಸ್ಪಂದಿಸಿ, ಉದಾರ ದೇಣಿಗೆಯನ್ನು ನೀಡುವುದರ ಮೂಲಕ ಮತ್ತಷ್ಟು ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಬದುಕನ್ನು ರೂಪಿಸಿಕೊಳ್ಳಲು ನೆರವಾಗಬೇಕೆಂದು ವಿನಮ್ರ ಕೋರಿಕೆ.

ದೇಣಿಗೆ ನೀಡಲು ಆಸಕ್ತಿ ಮತ್ತು ಮನಸ್ಸು ಉಳ್ಳವರು ಶ್ರೀ ಎಸ್.ಎನ್. ಶರತ್ ಚಂದ್ರ, ಸಂಚಾಲಕರು, ವ್ಯಾಸಂಗ ಸಹಾಯ ಯೋಜನೆ (ಮೊ. 9886040271) ಇವರನ್ನು ಸಂಪರ್ಕಿಸಬೇಕಾಗಿ ವಿನಂತಿ.

# ಆನಂದ ಉದ್ಯೋಗ ಮೇಳ 2016

ಆನಂದ ಬಳಗದ ಯುವ ವಿಭಾಗವು ಹಮ್ಮಿಕೊಂಡಿದ್ದ ಮೊತ್ತ ಮೊದಲ ಕಾರ್ಯಕ್ರಮ ಉದ್ಯೋಗ ಮೇಳ 2016 ಭರ್ಜರಿ ಯಶಸ್ಸನ್ನು ಕಂಡಿದೆ. 2016-2018ನೇ ಸಾಲಿನ ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ದಿನೇಶ್ ರಾವ್ ತನ್ನದೇ ಆದ ಯುವ ಕಾರ್ಯ ತಂಡವೊಂದನ್ನು ರಚಿಸಿ, ವಿಭಾಗ ಹಮ್ಮಿಕೊಳ್ಳಬಹುದಾದ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚೆ, ವಿಚಾರ ವಿನಿಮಯ ಮಾಡುತ್ತಿದ್ದಾಗ, ಮೊದಲು ಪ್ರಸ್ತಾಪ ಆಗಿರುವುದೇ ಈ ಮೇಳ. ನಮ್ಮ ಯುಜನರು ಇದೀಗ ತಮ್ಮ ಅರ್ಹತಾ ಪರೀಕ್ಷೆಗಳನ್ನು ಮುಗಿಸಿದ್ದು, ಕೆಲವರಾದರೂ ಉದ್ಯೋಗವನ್ನು ಅರಸುವುದು ಸಹಜ. ಹಾಗೆನೇ ನಮ್ಮ ಬಳಗದವರು ಬೆಂಗಳೂರಿನಲ್ಲಿ ಅನೇಕ ಕೈಗಾರಿಕೆ, ಸೇವಾ ನಿರತ ಚಟುವಟಿಕೆ ಹಾಗೂ ಇನ್ನಿತರ ವ್ಯವಹಾರಗಳನ್ನು ನಡೆಸುತ್ತಿದ್ದು, ತಮ್ಮ ಸಂಸ್ಥೆಗಳಿಗೆ ಕೆಲಸಗಾರರನ್ನು ಹುಡುಕುತ್ತಿರುವುದು ಸರ್ವೇ ಸಾಮಾನ್ಯ. ಈ ಎರಡು ಪರಸ್ಪರ ವ್ಯಕ್ತಿಗಳನ್ನು ಅಂದರೆ ಉದ್ಯೋಗದಾತರು ಮತ್ತು ಉದ್ಯೋಗಾಕಾಂಕ್ಷಿಗಳನ್ನು ಒಂದೆಡೆ ಸೇರಿಸಿದರೆ ಇಬ್ಬರಿಗೂ ಅನುಕೂಲ ಎಂಬ ದೃಷ್ಟಿಯಿಂದ ಸಂಯೋಜಿಸಿದ್ದ ಈ ಉದ್ಯೋಗ ಮೇಳ ತನ್ನ ಉದ್ದೇಶ ಸಾಧನೆಯಲ್ಲಿ ಬಹುಮಟ್ಟಿಗೆ ಸಫಲವಾಗಿದೆ ಎನ್ನಬಹುದು.




ರಿಜಿಸ್ಟ್ರೇಷನ್ ಕೌಂಟರ್.......

ನಮ್ಮ ಸಮಾಜದವರು ನಡೆಸುವ ಸಂಸ್ಥೆಗಳಿಗೆ ನಮ್ಮ ಸಮಾಜದ ಉದ್ಯೋಗಾರ್ಥಿಗಳನ್ನೇ ಸರಿಹೊಂದಿಸುವ ಮೂಲ ಉದ್ದೇಶದಿಂದ ಈ ಮೇಳವನ್ನು ಯೋಜನೆ ಮಾಡಿದರೂ, ಅನುಷ್ಠಾನ ಹಂತದಲ್ಲಿ ಈ ಷರತ್ತನ್ನು ಸ್ವಲ್ಪ ಸಡಿಲಿಸಬೇಕಾಯಿತು ಎನ್ನುತ್ತಾರೆ ಶ್ರೀ ದಿನೇಶ್‌ರಾವ್. ಉದ್ಯೋಗದಾತ ಸಂಸ್ಥೆಗಳನ್ನು ಸಂಪರ್ಕಿಸಿ ಅವರು ಈ ಮೇಳದಲ್ಲಿ ಭಾಗವಹಿಸಲು ಸಮ್ಮತಿಸಿದಾಗ, ಕೇವಲ ನಮ್ಮ ಸಮಾಜದವರನ್ನು ಮಾತ್ರ ಉದ್ಯೋಗಕ್ಕೆ ಪರಿಗಣಿಸಬೇಕೆಂದು ಹೇಳುವುದು ಪ್ರಾಕ್ಟಿಕಲ್ ಆಗಲಿಕ್ಕಿಲ್ಲ ಎಂಬ ವಿಷಯ ಅರಿವಿಗೆ ಬಂದಾಗ, ಈ ಮೇಳದ ವ್ಯಾಪ್ತಿಯನ್ನು ತುಸು ವಿಸ್ತರಿಸುವುದು ಅನಿವಾರ್ಯವಾಯಿತು. ಮುಂದಿನ ವರ್ಷಗಳಲ್ಲಿ ನಮ್ಮ ಸಮಾಜದ ಉದ್ಯೋಗದಾತರೇ ಪಾಲ್ಗೊಂಡು ನಮಗೇ ಉಪಯೋಗವಾಗುವಂತಹ ಉದ್ಯೋಗ ಮೇಳನನ್ನು ಸಂಯೋಜಿಸಲು ಸಾಧ್ಯವಾಗಬಹುದೆಂದು ಯುವ ವಿಭಾಗದ ಅನಿಸಿಕೆ.



ಉದ್ಯೋಗದಾತರು - ಆಕಾಂಕ್ಷಿಗಳ ವಿಚಾರ - ವಿನಿಮಯ

ದಿನಾಂಕ 25.06.2016 ರಂದು ರಾಜಾರಾಂ ರಸ್ತೆಯ ಹೋಟೆಲ್ ಉಡ್‌ಲ್ಯಾಂಡ್‌ನ ಗ್ರೀನ್ ಆರ್ಚ್ ಸಭಾಂಗಣದಲ್ಲಿ ಪೂರ್ವಾಹ್ನ 10 ರಿಂದ ಸಂಜೆ 4 ರವರೆಗೆ ಸರಾಗವಾಗಿ ನಡೆದ ಉದ್ಯೋಗ ಮೇಳದಲ್ಲಿ ಸುಮಾರು 60 ಉದ್ಯೋಗದಾತರು ಪಾಲ್ಗೊಂಡಿದ್ದರು. ಟೆಡ್ ಮ್ಯಾಗ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕನ್ಸಲ್‌ಟೆಂಟ್ಸ್ (ಪ್ರೈ) ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್.ಕೆ. ಭಟ್ ಇವರು ಉದ್ಯೋಗ ಮೇಳವನ್ನು ಔಪಚಾರಿಕವಾಗಿ ಉದ್ಘಾಟಿಸಿ ಶುಭ ಕೋರಿದರು. ಉದ್ಯೋಗ ಮೇಳಕ್ಕೆ ಭೇಟಿ ಇತ್ತ ಬಳಗದ ಅಧ್ಯಕ್ಷರಾದ ಶ್ರೀಮತಿ ಗೀತಾ ವಾಸುದೇವರಾವ್‌ರವರು ಯುವ ವಿಭಾಗ ಇಂತಹ ಒಂದು ಒಳ್ಳೆಯ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿರುವುದಕ್ಕೆ ಸಂತಸ ವ್ಯಕ್ತಪಡಸಿ, ಶ್ರಮಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು. ಬಳಗದ ಸದಸ್ಯರ ಕುಟುಂಬ ವರ್ಗದವರೂ ಸೇರಿದಂತೆ ಸುಮಾರು 360 ಉದ್ಯೋಗ ಆಕಾಂಕ್ಷಿಗಳು ಮೇಳದಲ್ಲಿ ಅತ್ಯಂತ ಆಸಕ್ತಿಯಿಂದ ಭಾಗವಹಿಸಿದ್ದರು.

ನಮ್ಮ ಯುವ ಜನರು ಕೇವಲ ಉದ್ಯೋಗಗಳಿಗೆ ಕಾಯದೇ, ಸ್ವಂತ ಉದ್ಯಮಗಳನ್ನು ಪ್ರಾರಂಭಿಸುವುದರ ಮೂಲಕ ಉದ್ಯೋಗದಾತರಾಗಬೇಕಾದುದು ಅಪೇಕ್ಷಣೀಯ. ಈ ಅಂಶವನ್ನು ಮನಗಂಡು ಸ್ವ ಉದ್ಯಮ ಕೈಗೊಳ್ಳಲು ತುಸು ಆಸಕ್ತಿ ಉಳ್ಳ ಯುವ ಜನರಿಗೆ ಈ ಬಗ್ಗೆ ಅಗತ್ಯವಿರುವ ಮಾಹಿತಿಗಳನ್ನು, ಸರ್ಕಾರದ ಉತ್ತೇಜನ ಮತ್ತು ರಿಯಾಯಿತಿಗಳ ಬಗ್ಗೆ ವಿವರಣೆ ನೀಡಲು ಹಾಗೂ ಉದ್ಯೋಗಾರ್ಥಿಗಳಿಗೆ ಅಗತ್ಯವಿರುವ ಕೆಲವು ಮಾಹಿತಿಗಳನ್ನು ನೀಡುವ ಪ್ರತ್ಯೇಕವಾದ ಸಲಹಾ ಕೌಂಟರ್‌ನ್ನು ತೆರೆದಿರುವುದು ಕೆಲವರಿಗಾದರೂ ಉಪಯೋಗವಾಗಿರಬಹುದು. ಮೇಳದಲ್ಲಿ ಭಾಗವಹಿಸಿದ

ಉದ್ಯೋಗದಾತರಿಗೆ ಪ್ರತ್ಯೇಕವಾದ ಸುಸಜ್ಜಿತವಾದ ಕೌಂಟರ್‌ಗಳ ವ್ಯವಸ್ಥೆ ಮಾಡಲಾಗಿತ್ತಲ್ಲದೆ, ಉದ್ಯೋಗಾರ್ಥಿಗಳಿಗೆ ಅನುಕೂಲ ವಾಗುವ ಎಲ್ಲಾ ವ್ಯವಸ್ಥೆಗಳನ್ನು, ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶವಿಲ್ಲದಂತೆ ಯುವ ವಿಭಾಗದ ಕಾರ್ಯತಂಡ ಮಾಡಿ, ಕಾರ್ಯಕ್ರಮವು ಕ್ರಮಬದ್ಧವಾಗಿ ನಡೆಯುವಂತೆ ನಿಗಾವಹಿಸಿರುವುದು ಶ್ಲಾಘನೀಯ. ಇದಕ್ಕಾಗಿ ಮೇಳದಲ್ಲಿ ಪಾಲ್ಗೊಂಡ ಎಲ್ಲರೂ ಮೆಚ್ಚುಗೆಯನ್ನು ಸೂಚಿಸಿದ್ದು, ಆ ಕೀರ್ತಿ ಯುವ ವಿಭಾಗದ ಸಂಚಾಲಕರು ಮತ್ತು ಅವರ 25 ಸದಸ್ಯರ ಕಾರ್ಯತಂಡಕ್ಕೆ ಸೇರಲೇಬೇಕು. ಕಳೆದ ಒಂದು ತಿಂಗಳಿಂದ ಎಡೆ ಬಿಡದೆ, ಶಕ್ತಿಮೀರಿ ಶ್ರಮಿಸಿದ ಇವರ ದುಡಿಮೆ ಸಾರ್ಥಕ ಎನ್ನಲೇ ಬೇಕು. ಉದ್ಯೋಗ ಮೇಳದ ದಿನ ಸುಸಜ್ಜಿತವಾದ ಗ್ರೀನ್ ಆರ್ಚ್ ಸಭಾಂಗಣವನ್ನು ಒದಗಿಸಿಕೊಟ್ಟಿರುವುದಲ್ಲದೆ, ಆ ದಿನ ಪೂರ್ತಿ ಉಟೋಪಚಾರದ ವ್ಯವಸ್ಥೆಯನ್ನು ಉಚಿತವಾಗಿ ಮಾಡಿ ಉಪಕರಿಸಿರುವ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಮಾಲಿಕರಾದ ಶ್ರೀ ಕೆ. ವಾಸುದೇವರಾವ್ ಮತ್ತು ಶ್ರೀಮತಿ ಗೀತಾ ವಾಸುದೇವರಾವ್‌ರವರ ಉದಾರತೆಗೆ ಕೃತಜ್ಞತೆ ಸಲ್ಲಲೇ ಬೇಕು. ಇಂತಹ ಉದ್ಯೋಗ ಮೇಳಗಳ ಫಲ ಅಂದೇ ಲಭಿಸುತ್ತದೆ ಎಂದು ನಿರೀಕ್ಷಿಸುವುದು ತಪ್ಪು. ಈ ಉದ್ಯೋಗ ಮೇಳ ನಾಂದಿಯಷ್ಟೆ. ಪ್ರಯತ್ನ ಸಾಗಿದಾಗ, ಪ್ರತಿಫಲ ಲಭಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

## ಆನಂದ ಬಳಗ – ಸದಸ್ಯರ ನೋಂದಣಿ ಅಭಿಯಾನ – ಯುವ ಜನರಿಗೆ ಆಹ್ವಾನ!

ಆನಂದ ಬಳಗವು 28 ವರ್ಷಗಳನ್ನು ಯಶಸ್ವಿಯಾಗಿ ಮುಗಿಸಿದ್ದು, ವರ್ಷದಿಂದ ವರ್ಷಕ್ಕೆ ಬಳಗದ ಜನಪ್ರಿಯತೆ ಜಾಸ್ತಿಯಾಗುತ್ತಾ ಇದೆ. ಪ್ರಸಕ್ತ, ಬಳಗದಲ್ಲಿ 1900 ಸದಸ್ಯತ್ವ ನೋಂದಣಿಯಾಗಿದ್ದು, ವಿವರ ಈ ರೀತಿ ಇದೆ:

| | |
|---|---|
| ಆಜೀವ ಸದಸ್ಯರು – 900 | ಪೋಷಕ ಸದಸ್ಯರು – 29 |
| ದಾನಿ ಸದಸ್ಯರು – 632 | ಮಹಾ ಪೋಷಕ ಸದಸ್ಯರು – 15 |
| ಮಹಾದಾನಿ ಸದಸ್ಯರು – 324 | |

ಬಳಗದ ಸದಸ್ಯತ್ವ ಸಂಖ್ಯೆಯನ್ನು ಗಣನೀಯ ಪ್ರಮಾಣದಲ್ಲಿ ಅಧಿಕಗೊಳಿಸುವ ಮಹದಾಸೆಯಿಂದ ಸದಸ್ಯತ್ವ ಅಭಿವೃದ್ಧಿ ವಿಭಾಗವು 2016-17ನೇ ವರ್ಷದಲ್ಲಿ ಸದಸ್ಯರ ನೋಂದಣಿ ಅಭಿಯಾನವೊಂದನ್ನು ಹಮ್ಮಿಕೊಂಡಿದೆ. ತಿಂಗಳಿಗೆ ಕನಿಷ್ಠ 10–15 ಹೊಸ ಸದಸ್ಯರನ್ನು ಬಳಗಕ್ಕೆ ಸೇರಿಸಿಕೊಳ್ಳುವ ಗುರಿಯನ್ನು ಇರಿಸಿಕೊಂಡಿರುವ ಈ ಅಭಿಯಾನದಲ್ಲಿ ಬಳಗಕ್ಕೆ ಹೆಚ್ಚು ಯುವ ಜನರನ್ನು ಆಕರ್ಷಿಸುವ ಉದ್ದೇಶವನ್ನು ಹೊಂದಲಾಗಿದೆ.

ಅಪಾರವಾದ ಯುವ ಶಕ್ತಿಯನ್ನು ಬಳಗದ ಸಮಗ್ರ ಅಭಿವೃದ್ಧಿಗಾಗಿ ಬಳಸಿಕೊಳ್ಳುವುದು ಅಪೇಕ್ಷಣೀಯವಾಗಿದ್ದು, ಬಳಗದ ಸದಸ್ಯರ ಮನೆಯಲ್ಲಿರುವ, 18 ವರ್ಷ ದಾಟಿದ ಮಗ ಅಥವಾ ಮಗಳನ್ನು ಆನಂದಬಳಗಕ್ಕೆ ನೂತನ ಸದಸ್ಯರಾಗಿ ಸೇರಿಸಲು ಹಿರಿಯ ಸದಸ್ಯರು ಉತ್ತೇಜಿಸಬೇಕಾಗಿ ಕೋರಲಾಗಿದೆ. ಬಳಗದ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಯುವಜನರು ಸಕ್ರಿಯ ವಾಗಿ ಭಾಗವಹಿಸುವಂತಾಗಿ, ಬಳಗದ ಸರ್ವತೋಮುಖ ಬೆಳವಣಿಗೆಗೆ ಹಿರಿಯ-ಕಿರಿಯರು ಜೊತೆ-ಜೊತೆಯಾಗಿ ಶ್ರಮಿಸುವುದು ಅತ್ಯಗತ್ಯವಾಗಿದೆ.

(ಆನಂದ ಬಳಗದ ಸದಸ್ಯತ್ವ ನೋಂದಣಿ ಅರ್ಜಿ ಬಳಗದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಆಸಕ್ತರು ಅದನ್ನು ಡೌನ್‌ಲೋಡ್ ಮಾಡಿ, ಭರ್ತಿಮಾಡಿ ಸಲ್ಲಿಸಬಹುದಾಗಿದೆ)

**ನಿಮ್ಮ ಸಹಕಾರವನ್ನು ನಿರೀಕ್ಷಿಸುವ :**

**ಎಂ.ಕೆ. ಗುರುಮೂರ್ತಿ**
ಸಂಚಾಲಕರು, ಸದಸ್ಯತ್ವ ಅಭಿವೃದ್ಧಿ ವಿಭಾಗ
(ಮೊ. 98440 22692)

## ಆನಂದ ಬಳಗ : ಸರ್ವಸದಸ್ಯರ ವಾರ್ಷಿಕ ಮಹಾಸಭೆ

**ಆನಂದಬಳಗದ 2015-16ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾ ಸಭೆಯು ದಿನಾಂಕ 18.9.2016ರ ಭಾನುವಾರ ಪೂರ್ವಾಹ್ನ 10.30 ಘಂಟೆಗೆ ಹೋಟೆಲ್ ಅಜಂತಾ ಆವರಣದಲ್ಲಿ ನಡೆಯಲಿದೆ. ಈ ಸಭೆಗೆ ಸೂಚನಾ ಪತ್ರವನ್ನು ಸಕಾಲದಲ್ಲಿ ಸದಸ್ಯರಿಗೆ ಇ-ಮೇಲ್ ಮೂಲಕ ಕಳುಹಿಸಲಾಗುವುದು. ಎಲ್ಲಾ ಸದಸ್ಯರು ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಿಕೆ.**

**– ಕಾರ್ಯದರ್ಶಿ, ಆನಂದಬಳಗ**

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್




## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

---

ಶುಭಾಶಯಗಳನ್ನು ಕೋರುವವರು :



## ಉಡುಪಿ ಸ್ಟೋರ್ಸ್

ಗುಂಡೋಪಂತ ಬೀದಿ, ಮಾರ್ಕೆಟ್ ರಸ್ತೆ,
ಬೆಂಗಳೂರು - 560002

ಮನೆಗಳಿಗೆ, ದೇವಸ್ಥಾನಗಳಿಗೆ, ಹಾಗೂ
ಮಠಗಳಿಗೆ ಉಪಯುಕ್ತವಾದ ಪೂಜಾ ಸಾಮಗ್ರಿಗಳು,
ಉತ್ತಮ ದಾವಣಿ, ಮಗುಟ, ಮಡಿಪಂಚೆ,
ಗೋಪೀಚಂದನ, ಧಾರ್ಮಿಕ ಅಧ್ಯಾತ್ಮಿಕ ಪುಸ್ತಕಗಳು,
ಇಲ್ಲಿ ಸುಲಭ ದರದಲ್ಲಿ ದೊರೆಯುತ್ತದೆ.

ಸ್ಥಾಪಕರು : ಶ್ರೀ ಟಿ. ಆರ್. ಕೇಕುಡ

---

ಶುಭಾಶಯಗಳನ್ನು ಕೋರುವವರು :

## ಎಂ.ಜಿ.ಎಸ್‌ಕೆ. ವಧು ವರಾನ್ವೇಷಣಾ ಕೇಂದ್ರ

(ಅಖಿಲಾ ಕರ್ನಾಟಕ ಬ್ರಾಹ್ಮಣ ಸಭಾದ ಅಂಗ ಸಂಸ್ಥೆ)

ಈ ಸಂಸ್ಥೆಯು ಕಳೆದ ಹತ್ತು ವರ್ಷಗಳಲ್ಲಿ 100ಕ್ಕೂ ಹೆಚ್ಚು ವಧೂವರರ ಮುಖಾಮುಖಿ ಸಮಾವೇಶಗಳನ್ನು ವ್ಯವಸ್ಥೆಗೊಳಿಸಿ, ಸಾವಿರಕ್ಕೂ ಹೆಚ್ಚು ವಿವಾಹಗಳಿಗೆ ಕಾರಣೀಭೂತವಾಗಿದೆ. ವಿಧವೆಯರು, ಅಂಗವಿಕಲರು, ವಿಚ್ಛೇದಿತರು, ವಯೋಮಿತಿ ಮೀರಿದವರಿಗೆ ವಿಶೇಷ ಗಮನ ನೀಡಲಾಗುವುದು.

### ಕ್ಷೇಮ ಮಹಿಳಾ ವಸತಿ ನಿಲಯ

ದುಡಿಯುವ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸುಸಜ್ಜಿತವಾದ, ಸುಭದ್ರವಾದ ಸಸ್ಯಾಹಾರೀ ಊಟ ವಸತಿಗಳನ್ನು ಮಿತವ್ಯಯದಲ್ಲಿ ಒದಗಿಸಲಾಗುವುದು.

*ಹೆಚ್ಚಿನ ವಿವರಗಳಿಗೆ :* ಸುಮಂಗಲಾ ಎಸ್. ಆಚಾರ್
*ದೂರವಾಣಿ : 26791217, 26710797, 9844320328*

ಸೋಮೇಶ್ವರ 3799, 13ನೇ ಕ್ರಾಸ್, ಬನಶಂಕರಿ 2ನೇ ಹಂತ
(ಇಂದಿರಾ ನರ್ಸಿಂಗ್ ಹೋಂ ಬಸ್‌ಸ್ಟಾಪ್ ಹತ್ತಿರ) ಬೆಂಗಳೂರು - 70

---

ಶುಭಾಶಯಗಳೊಡನೆ,

### ಕೋಟೇಶ್ವರ ಸೂರ್ಯನಾರಾಯಣ ರಾವ್

ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.
ಅಧ್ಯಕ್ಷರು

ಉದ್ಯಮ :

## ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್

21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು - 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# ಆನಂದ ಬಳಗ - ಯುವ ವಿಭಾಗದ ಕಾರ್ಯ ಚಟುವಟಿಕೆಗಳ ಮುನ್ನೋಟ

ಆನಂದ ಬಳಗದ ಯುವ ವಿಭಾಗದ ನೂತನ ಸಂಚಾಲಕರಾದ ಶ್ರೀ ಎಂ. ದಿನೇಶ್‌ರಾವ್ ರವರು ಯುವ ವಿಭಾಗವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವತ್ತ ಪಣತೊಟ್ಟು, ಈಗಾಗಲೇ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚಿಂತನೆ ನಡೆಸಿದ್ದಾರೆ. ತನ್ನದೇ ಆದ ಕಾರ್ಯತಂಡವನ್ನೊಂದು ರಚಿಸಿಕೊಂಡು, ನಿಯತಕಾಲಿಕವಾಗಿ ಚರ್ಚೆ, ವಿಚಾರ-ವಿನಿಮಯವನ್ನು ಮಾಡುತ್ತಾ, ಬಳಗದ ಸದಸ್ಯರಿಗೆ ವಿಶೇಷವಾಗಿ ಯುವಜನರಿಗೆ ಉಪಯೋಗವಾಗುವ ಹಾಗೂ ಯುವಜನರನ್ನು ಬಳಗದತ್ತ ಆಕರ್ಷಿಸುವ ದೃಷ್ಟಿಯಿಂದ ಕೆಲವೊಂದು ನಿರ್ದಿಷ್ಟ ಕಾರ್ಯಚಟುವಟಿಕೆಗಳ ಬಗ್ಗೆ ಈಗಾಗಲೇ ರೂಪುರೇಶೆಯನ್ನು ಸ್ಥೂಲವಾಗಿ ರೂಪಿಸಿದ್ದು, ಮುಂಬರುವ ದಿನಗಳಲ್ಲಿ ಇವೆಲ್ಲವೂ ಕಾರ್ಯಗತವಾಗಲಿದೆ. ದಿನಾಂಕ 25.6.2016ರಂದು ನಡೆದ ಉದ್ಯೋಗ ಮೇಳದಿಂದ ಪ್ರಾರಂಭಗೊಂಡು ನಿರೂಪಣಾ ಕಾರ್ಯಾಗಾರ, ಸಲಹಾ ಶಿಬಿರ, ಸಂಸ್ಕೃತ ಶಿಕ್ಷಣ ಶಿಬಿರ ಹೀಗೆ ನಾಲ್ಕಾರು ಹೊಸ ಕಾರ್ಯಕ್ರಮಗಳನ್ನು ಈ ವರ್ಷ ಸಂದರ್ಭಾನುಸಾರ ಸಂಯೋಜಿಸಲಾಗುವುದು. ಆನಂದಬಳಗದಲ್ಲಿ ಕಳೆದ ಹಲವಾರು ವರ್ಷಗಳಿಂದ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು, ಬಳಗದ ಆಗುಹೋಗುಗಳನ್ನು ಹತ್ತಿರದಿಂದ ಬಲ್ಲ ಶ್ರೀ ದಿನೇಶ್‌ರಾವ್‌ರವರ ಉಸ್ತುವಾರಿಯಲ್ಲಿ ಯುವ ವಿಭಾಗ ಯಶ ಕಾಣಲಿ ಎಂದು ಎಲ್ಲರ ಹಾರೈಕೆ.

**ಯುವ ವಿಭಾಗದ ಮುಂಬರುವ ಕೆಲವು ಕಾರ್ಯಕ್ರಮಗಳ ಸ್ಥೂಲ ವಿವರ :**

ನಿರೂಪಣಾ ಕಾರ್ಯಾಗಾರ : ಸಮಾರಂಭಗಳ ನಿರೂಪಣೆ, ವೇದಿಕೆಯ ವ್ಯವಸ್ಥಾಪನೆ, ಸಂದರ್ಭಾನುಸಾರ ಭಾಷಣ ಹೀಗೆ ಹಲವಾರು ವಿಚಾರಗಳಲ್ಲಿ ಸುಲಲಿತಾಗಿ ಯಾವುದೇ ಸಭಾ ಕಂಪನ ಇಲ್ಲದೆ ಕಾರ್ಯ ನಿರ್ವಹಿಸುವ ಬಗ್ಗೆ ಪರಿಣತರು ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಲಿರುವ ಈ ಕಾರ್ಯಾಗಾರ ಸುಮಾರು ಅಗೋಸ್ಟ್ / ಸೆಪ್ಟೆಂಬರ್ ತಿಂಗಳಲ್ಲಿ ನಡೆಯಲಿದೆ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ಆಸಕ್ತಿ ಉಳ್ಳವರು ಶ್ರೀ ಸಂದೀಪ್‌ರಾವ್ (98450 98150) ಅಥವಾ ಶ್ರೀಮತಿ ಚಂದ್ರಿಕಾ ರಾಜೇಶ್‌ರಾವ್ (9986938802) ಅವರನ್ನು ಸಂಪರ್ಕಿಸಿ, ಹೆಚ್ಚಿನ ವಿವರಗಳನ್ನು ಪಡೆಯಲು ಕೋರಲಾಗಿದೆ.

**ಶೈಕ್ಷಣಿಕ ಸಮಾಲೋಚನೆ/ಕೌನ್ಸಿಲಿಂಗ್ :**

ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣದಲ್ಲಿ ಅತ್ಯುತ್ತಮ ಫಲಿತಾಂಶ ಸಾಧಿಸಲು ಪೂರಕವಾಗುವ ಕ್ರಮಗಳು ಹಾಗೂ ಓದಿನ ವಿಧಾನ ಹಾಗೂ ಮುಂದಿನ ಶಿಕ್ಷಣದ ಆಯ್ಕೆ ಬಗ್ಗೆ ಮಾರ್ಗದರ್ಶನ, ವ್ಯಾಸಂಗದಲ್ಲಿ ಹಿಂದೆ ಬಿದ್ದಿರುವ ವಿದ್ಯಾರ್ಥಿಗಳು ಅದನ್ನು ಪರಿಹರಿಸಿಕೊಳ್ಳುವ ಬಗ್ಗೆ ಸುಲಭೋಪಾಯಗಳು ಮುಂತಾದ ವಿಚಾರಗಳಲ್ಲಿ ಒಂದು ದಿನದ ಸಮಾಲೋಚನೆ/ಕೌನ್ಸಿಲಿಂಗ್‌ನ್ನು ದಶಂಬರ್ 2016/ಜನವರಿ 2017ರಲ್ಲಿ ಹಮ್ಮಿಕೊಳ್ಳಲಾಗುವುದು. ಆಸಕ್ತ ವಿದ್ಯಾರ್ಥಿಗಳು ಅಥವಾ ಅವರ ಪಾಲಕರು ಶ್ರೀಮತಿ ಅಮಿತಾ ಡಿ.ರಾವ್ (98459 76036) ಅಥವಾ ಶ್ರೀಮತಿ ಶೋಭಾ ರಾಧಾಕೃಷ್ಣ (98447 25547) ಇವರನ್ನು ಸಂಪರ್ಕಿಸಿ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿದೆ.

**ವೇದಪಾಠ ಮತ್ತು ಸಂಸ್ಕೃತ ಶಿಬಿರ :**

ಉಪನಯನ ಆಗಿರುವ ಎಸ್.ಎಸ್.ಎಲ್.ಸಿ ಯವರೆಗಿನ ಬಾಲಕರಿಗೆ ವೇದಪಾಠ ಹಾಗೂ ದಿನನಿತ್ಯ ಪಠಣೆಗೆ ಸೂಕ್ತವಾದ ಶ್ಲೋಕ/ಮಂತ್ರಗಳ ಕಲಿಕೆಯನ್ನು ಈ ಶಿಬಿರದಲ್ಲಿ ಸಂಯೋಜಿಸಲಾಗುವುದು. ಮನೆಯಲ್ಲಿ ನಿತ್ಯಪೂಜೆ ಮಾಡಲು ಅಗತ್ಯವಿರುವ ಮಂತ್ರ-ತಂತ್ರಗಳ ಬಗ್ಗೆಯೂ ಪರಿಣತ ವಿದ್ವಾಂಸರಿಂದ ಶಿಕ್ಷಣವನ್ನು ನೀಡಲಿರುವ ಈ ಶಿಬಿರಗಳನ್ನು ನಗರದ ವಿವಿಧ ಬಡಾವಣೆಗಳಲ್ಲಿ ಸಂಯೋಜಿಸಲು ಪ್ರಸ್ತಾಪಿಸಲಾಗಿದೆ. ಈ ಶಿಬಿರದ ಬಗ್ಗೆ ಸಲಹೆ-ಸೂಚನೆಗಳನ್ನು ಸದಸ್ಯರು ನೀಡಬೇಕಾಗಿ ಕೋರಲಾಗಿದೆ. ಸದಸ್ಯರ ಸಲಹೆಗಳನ್ನು ಆಧರಿಸಿ ಈ ಶಿಬಿರಕ್ಕೆ ಅಂತಿಮ ರೂಪ ನೀಡಲಾಗುವುದು. ಸಲಹೆ ಸೂಚನೆ ನೀಡುವವರು ಹಾಗೂ ಭಾಗವಹಿಸಲು ಆಸಕ್ತಿಯಿರುವವರು ಯುವ ವಿಭಾಗದ ಸಂಚಾಲಕರನ್ನು ಸಂಪರ್ಕಿಸಬಹುದಾಗಿದೆ.

ಈ ಎಲ್ಲಾ ಪ್ರಸ್ತಾಪಿತ ಕಾರ್ಯಚಟುವಟಿಕೆಗಳ ಬಗ್ಗೆ ಸದಸ್ಯರ ಸಲಹೆ ಅಭಿಪ್ರಾಯಗಳಿಗೆ ಸ್ವಾಗತವಿದೆ. ಹೆಚ್ಚಿನ ವಿವರಗಳಿಗೆ ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ದಿನೇಶ್‌ರಾವ್ (99456 88955) ಅಥವಾ ಉಪ ಸಂಚಾಲಕರಾದ ಶ್ರೀ ಪ್ರಕಾಶ್ ಭಟ್ (98455 06777) ಅವರನ್ನು ಸಂರ್ಕಿಸಬಹುದಾಗಿದೆ.

**ಆನಂದ-ಉದ್ಯೋಗ-ಹೈಲೆಟ್ಸ್ !**

| | |
|---|---|
| ಪಾಲ್ಗೊಂಡ ಉದ್ಯೋಗದಾತರು | : 60 |
| ಉದ್ಯೋಗದಾತರು ಮತ್ತಿತರ ಡೆಸ್ಕ್‌ಗಳು | : 75 |
| ಭಾಗವಹಿಸಿದ ಸ್ವಯಂಸೇವಕರು | : 70 |
| ವರ್ಗೀಕೃತ ಸ್ಥೂಲ ಉದ್ಯೋಗ ಕ್ಷೇತ್ರಗಳು | : 9 |
| ಕೋಡಿ ಫೈಡ್ ಜಾಬ್ ಐಡಿ 10001-100136 | |
| ಭಾಗವಹಿಸಿದ ಉದ್ಯೋಗಾರ್ಥಿಗಳು | : 362 |
| ಸ್ಥಳದಲ್ಲೇ ಉದ್ಯೋಗಕ್ಕೆ ಆಯ್ಕೆಯಾದವರು | : 3 |
| ಸ್ಥಳದಲ್ಲೆ ಆಯ್ಕೆ ಪ್ರಕ್ರಿಯೆ ಅಂತಿಮವಾಗಿರುವವರು | : 25 |



# ಬೆಂಗಳೂರಿನಲ್ಲಿ ಪೂಜ್ಯ ಪುತ್ತಿಗೆ ಶ್ರೀಯವರ ಚಾತುರ್ಮಾಸ್ಯ

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶ್ರೀ ಪುತ್ತಿಗೆ ಮಠಾಧೀಶರಾದ ಪರಮ ಪೂಜ್ಯ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ತಮ್ಮ 42ನೇ ಚಾತುರ್ಮಾಸ್ಯ ಸಂಕಲ್ಪವನ್ನು ಬೆಂಗಳೂರಿನಲ್ಲಿರುವ ಶ್ರೀ ಗೋವರ್ಧನಗಿರಿಧಾರಿ ಶ್ರೀ ಕೃಷ್ಣನ ಸನ್ನಿಧಾನದಲ್ಲಿ ಆಚರಿಸಲಿದ್ದಾರೆ. ದಿನಾಂಕ 31.7.2016ರಿಂದ 16.9.2016 ರವರೆಗೆ ನಡೆಯಲಿರುವ ಚಾತುರ್ಮಾಸ್ಯ ವ್ರತ ಸಂದರ್ಭದಲ್ಲಿ ಪೂಜ್ಯ ಪುತ್ತಿಗೆ ಶ್ರೀಯವರು ತಮಗೆ ಅತ್ಯಂತ ಆಪ್ತವಾಗಿರುವ ಭಗವದ್ಗೀತಾ ಸಂದೇಶದ ಪರಿಚಯ ಮತ್ತು ಪ್ರಸಾರದತ್ತ ಹೆಚ್ಚಿನ ಒತ್ತಾಸೆಯನ್ನು ನೀಡಲಿದ್ದು, ಇದರ ಜೊತೆಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರಗಳ ಪ್ರವಚನ, ಮತ್ತು ಪ್ರಸರಣಾ ಕೈಂಕರ್ಯಗಳನ್ನು ಕೈಗೊಳ್ಳಲಿದ್ದಾರೆ. ಇದಲ್ಲದೆ ಈ ಅವಧಿಯಲ್ಲಿ ಬರುವ ಶ್ರೀಕೃಷ್ಣ ಜನ್ಮಾಷ್ಟಮಿ, ವರಮಹಾಲಕ್ಷ್ಮಿ ವ್ರತ, ಗಣೇಶ ಚತುರ್ಥಿ ಮೊದಲಾದ ಹಬ್ಬ-ಹರಿದಿನಗಳನ್ನು ಅದ್ದೂರಿಯಿಂದ ಆಚರಿಸಲಾಗುವುದು. ಭಾರತ ದೇಶದ ಸುಪ್ರೀಂಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯರವರ ಅಧ್ಯಕ್ಷತೆಯಲ್ಲಿ ಪುತ್ತಿಗೆ ಶ್ರೀಗಳ 42ನೇ ಚಾತುರ್ಮಾಸ್ಯ ಸಂಕಲ್ಪ ಸಮಿತಿಯೊಂದನ್ನು ಈಗಾಗಲೇ ರಚಿಸಲಾಗಿದ್ದು, ಆನಂದ ಬಳಗದ ಹಲವು ಮಹನೀಯರು ಈ ಸಮಿತಿಯಲ್ಲಿದ್ದುಕೊಂಡು, ಚಾತುರ್ಮಾಸ್ಯವನ್ನು ಅತ್ಯಂತ ಯಶಸ್ವಿಗೊಳಿಸಲು ರೂಪುರೇಶೆಗಳನ್ನು ಸಿದ್ದಪಡಿಸುತ್ತಿದ್ದಾರೆ. ದಿನಾಂಕ 31.7.2016ರಂದು ಸಂಜೆ ಬಸವನಗುಡಿಯ ರಾಮಕೃಷ್ಣ ಆಶ್ರಮ ಚೌಕದಿಂದ ಗೋವರ್ಧನಗಿರಿ ಕ್ಷೇತ್ರಕ್ಕೆ ವೈಭವದ ಮೆರವಣಿಗೆಯಲ್ಲಿ ಪುತ್ತಿಗೆ ಶ್ರೀಗಳ ಪುರಪ್ರವೇಶ ಸಮಾರಂಭ ನಡೆಯಲಿದ್ದು, ದಿ.16-9-2016ರಂದು ಚಾತುರ್ಮಾಸ್ಯದ ಸಮಾರೋಪ ಸಮಾರಂಭ ನೆರವೇರಲಿದೆ.

ಬೆಂಗಳೂರಿನಲ್ಲಿ ಮೊತ್ತಮೊದಲಬಾರಿಗ ಚಾತುರ್ಮಾಸ್ಯ ವ್ರತವನ್ನು ಕೈಗೊಂಡಿರುವ ಹೆಗ್ಗಳಿಕೆ ಪುತ್ರಿಗೆ ಮಠಕ್ಕೆ ಸೇರಿದ್ದು, ಈಗ ಪೂಜ್ಯ ಸುಗುಣೇಂದ್ರ ತೀರ್ಥರು ತಮ್ಮ 42ನೇ ಚಾತುರ್ಮಾಸ್ಯವನ್ನು ಬೆಂಗಳೂರು ನಗರದಲ್ಲಿ ಆಚರಿಸಲು ಸಂಕಲ್ಪ ಮಾಡಿದ್ದಾರೆ, ಬೆಂಗಳೂರಿನ ಆಸಕ್ತರಿಗೆ ಲಭಿಸಿರುವ ಈ ಅಪರೂಪದ ಅವಕಾಶವನ್ನು ಹೆಚ್ಚಿನ ಪ್ರಮಾಣದಲ್ಲಿ ಸದುಪಯೋಗ ಪಡಿಸಿಕೊಳ್ಳಬೇಕಾದುದು ಅಪೇಕ್ಷಣೀಯ.


# ದ.ಕ. ಸಂಘದಿಂದ ಯುಗಾದಿ ಸಂಭ್ರಮ - ಸಂಘ ಸಮಾಗಮ

ದಕ್ಷಿಣ ಕನ್ನಡಿಗರ ಸಂಘದ ಆಶ್ರಯದಲ್ಲಿ ದಿನಾಂಕ 8.5.2016ರ ಭಾನುವಾರ ಜಯನಗರದ ಹೆಚ್.ಎನ್. ಕಲಾಕ್ಷೇತ್ರದಲ್ಲಿ 'ಯುಗಾದಿ ಸಂಭ್ರಮ-ಸಂಘ ಸಮಾಗಮ' ಎಂಬ ವಿಶೇಷ ಕಾರ್ಯಕ್ರಮವನ್ನು ಸಂಯೋಜಿಸಲಾಗಿತ್ತು. ಅಂದು ಸಂಜೆ ನಡೆದ ಈ ಸಮಾರಂಭವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್‌ರವರು ಉದ್ಘಾಟಿಸಿದರೆ, ಮುಖ್ಯ ಅತಿಥಿಗಳಾಗಿ ಜಯನಗರ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಬಿ.ಎನ್. ವಿಜಯಕುಮಾರ್‌ರವರು ಆಗಮಿಸಿದ್ದರು. ಸಂಘದ ಅಧ್ಯಕ್ಷರಾದ ಬಾ. ರಾಮಚಂದ್ರ ಉಪಾಧ್ಯ, ಉಪಾಧ್ಯಕ್ಷ ಡಾ. ಕೆ.ಸಿ. ಬಲ್ಲಾಳ್ ಮತ್ತು ಕಾರ್ಯದರ್ಶಿ ಶ್ರೀ ವೈ. ಜಯಂತರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅವಿಭಜಿತ ದ.ಕ. ಜಿಲ್ಲೆಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 25 ಸಂಘ-ಸಂಸ್ಥೆಗಳ ಮುಖ್ಯಸ್ಥರನ್ನು ವೇದಿಕೆಗೆ ಆಹ್ವಾನಿಸಿ, ಗೌರವಿಸಲಾಯಿತು. ಆನಂದ ಬಳಗದ ಪರವಾಗಿ ಉಪಾಧ್ಯಕ್ಷೆಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಭಟ್, ತುಳು ಶಿವಳ್ಳಿ ಮಾಧ್ವ ಮಂಡಲದ ಪರವಾಗಿ ಶ್ರೀ ಎಸ್. ಹರಿದಾಸ್ ಉಪಾಧ್ಯ, ಬೃಹತ್



ಬೆಂಗಳೂರು ಹೋಟೆಲ್ ಸಂಘದ ಪರವಾಗಿ ಶ್ರೀ ಪಿ.ಸಿ. ರಾವ್ ತುಳುವೆರೆಂಕ್ಲು ಅಧ್ಯಕ್ಷರಾದ ಶ್ರೀ ಕೆ.ಎನ್. ಅಡಿಗ ಇವರನ್ನು ಸಭೆಗೆ ಪರಿಚಯಿಸಿ, ಗೌರವವನ್ನು ನೀಡಲಾಯಿತು. ಸಭಾ ಕಾರ್ಯಕ್ರಮದ ನಂತರ ರಮಣ ಮಹರ್ಷಿ ಅಕಾಡೆಮಿಯ ಅಂಧ ಕಲಾವಿದರಿಂದ ಅಮೋಘವಾದ ನೃತ್ಯ ಕಾರ್ಯಕ್ರಮ ಸಭಾ ಸದರ ಮನಸೂರೆಗೊಂಡಿತು. ಸಂಜೆಯ ಉಪಾಹಾರದೊಂದಿಗೆ ಆರಂಭವಾದ ಸಮಾರಂಭ, ರಾತ್ರಿ ಭೋಜನದೊಂದಿಗೆ ಮುಕ್ತಾಯವಾಯಿತು.

# ಯೋಗಮಾರ್ಗದಿಂದ ಆರೋಗ್ಯ ಬಾಳ್ವೆ - ಕೆಲಸೂತ್ರಗಳು



**ಜಗತ್ತಿನಾದ್ಯಂತಹ ಜೂನ್ 21ನ್ನು 'ವಿಶ್ವಯೋಗ ದಿನ'ವನ್ನಾಗಿ ಆಚರಿಸಲಾಗಿದೆ. ಯೋಗದಲ್ಲಿ 40 ವರ್ಷ ಸತತ ಸಾಧನೆ ಮಾಡಿದ 73 ವರ್ಷ ವಯಸ್ಸಿನ ಯೋಗ ಪಟು ಶ್ರೀ ಪಿ.ಎಲ್.ರಾವ್‌ರವರು ಯೋಗದ ಮಹತ್ವವನ್ನು ಮತ್ತಿತರ ವಿಚಾರಗಳನ್ನು ಸರಳವಾಗಿ ವಿವರಿಸಿದ್ದಾರೆ, ಈ ಸಮಯೋಚಿತ ಲೇಖನದಲ್ಲಿ - ಸಂ**

ಈ ದಿನ ದೇಶದ ನಡುಪ್ರಾಯದ ಮತ್ತು ಹಿರಿಯರಲ್ಲಿ 60%ಕ್ಕಿಂತ ಜಾಸ್ತಿ ರಕ್ತದೊತ್ತಡ, ಮಧುಮೇಹ, ಗಂಟುನೋವು ಮತ್ತು ಉಬ್ಬಸಗಳಿಂದ ನರಳುತ್ತಿರುವ ಸಮಸ್ಯೆಗೆ ಏಕಮಾತ್ರ ಪರಿಹಾರ ಎಂದರೆ ಬಾಲ್ಯದಿಂದ ಯೋಗಾಧರಿತ ಜೀವನಶೈಲಿ. ಸನ್ 1990ರ ತನಕ ಸ್ವಾಮಿ ಶಿವಾನಂದ, ಮಹೇಶ ಯೋಗಿ, ಇತ್ತೀಚೆಗೆ ಶ್ರೀ ರವಿಶಂಕರ್, ರಾಮದೇವ್ ಎಲ್ಲ ನಮ್ಮೀ ಪ್ರಾಚೀನ ಸಂಪತ್ತನ್ನು ಪರದೇಶಗಳಿಗೆ ಪಸರಿಸಿದ್ದರೂ ಅವರೆಲ್ಲ ವಿವಿಧ ರೂಪದ ಧ್ಯಾನ, ಪ್ರಾಣಾಯಾಮ, ಆಸನಗಳು ತನ್ಮೂಲಕ ಪಾರಮಾರ್ಥಿಕ ಫಲ, ಒಂದಿಗೆ ಕೆಲಸದ ಒತ್ತಡ ನಿವಾರಣೆಗೆ ಒತ್ತುಕೊಟ್ಟರು. ಯೋಗಶೈಲಿಯನ್ನು ಸ್ವಜೀವನದಲ್ಲಿ ಸಮಗ್ರವಾಗಿ ಅಳವಡಿಸಿ ಇಹದಲ್ಲೆ ಅದರ ಫಲ ಕಂಡವರೆಂದರೆ ಗುರು ಬಿಕೆಎಸ್ ಅಯ್ಯಂಗಾರ್, ನಂತರ ಇತ್ತೀಚೆಗೆ ಅರಿತಂತೆ ಉಡುಪಿಯ ಶ್ರೀ ಪೇಜಾವರ ಶ್ರೀಯವರು. ಇಂದಿನ ಇತರ ಮಹಾ ಪ್ರತಿಪಾದಕರು ಇನ್ನೂ ನಡುಪ್ರಾಯಸ್ಥರು.

ಮೊಂಘೇರ್ ಜಿಲ್ಲೆಯಲ್ಲಿರುವ ಬಿಹಾರ್ ಸ್ಕೂಲ್ ಆಫ್ ಯೋಗ ಮಾತ್ರ ಸ್ವಾತಂತ್ರಪೂರ್ವದಿಂದ ಮೇಲೆ ಹೇಳಿದ ರೋಗಗಳಲ್ಲದೆ ಆಸ್ತಮಾ, ಗಂಟು/ಸಂದು/ಕೀಲಿಗಳ ನೋವು ಮತ್ತು ಜಠರವಾಯು ಬೇನೆಗಳನ್ನು ಮೂಲದಲ್ಲೆ ತಡೆಗಟ್ಟುವ ವಿಧಾನಗಳಿಗೆ ಒತ್ತು ಕೊಟ್ಟಿತ್ತು. ಅವರಿಂದ 1975ರಲ್ಲಿ ಅರಿತು ನಂತರದ 40 ವರ್ಷ ಸತತ ಸಾಧನೆ ಮಾಡಿದ ನಾನು (ಪ್ರಾಯ 73) ಅದರ ಫಲ ಪಡೆದವನಾಗಿ ವಿಶ್ವಯೋಗ ದಿನ (ಜೂನ್ 21)ದ ಈ ಸಮಯ ಕೆಲ ಮುಖ್ಯ ಸೂತ್ರಗಳನ್ನು ತಮ್ಮ ಮುಂದಿಡುತ್ತೇನೆ.

1. ಈ ಲೇಖನ ಲೌಕಿಕಕ್ಕೆ ಸೀಮಿತ, ನಿಲ್ಲುವ ಭಂಗಿಯಲ್ಲಿ 10 (ತಾಡ, ತ್ರಿಕೋಣ, ಬಸ್ಕಿ ಇತ್ಯಾದಿ) ಕುಳಿತು, ನಂತರ ಉದ್ದವಾಗಿ ಮಲಗಿ ಮಾಡುವ 15 (ವಜ್ರ, ಗುಪ್ತವಜ್ರ, ಶಶಾಂಕ, ಪದ್ಮ, ಮಯೂರ, ಭುಜಂಗ, ಕಪಾಲಭಾರತಿ, ಡೈನಾಮಿಕ್ ಪಶ್ಚಿಮೋತ್ಥಾನ - ಇತ್ಯಾದಿ) ಆಸನಗಳು, ಕೊನೆಗೆ ಸೂರ್ಯನಮಸ್ಕಾರ. ಎಲ್ಲವನ್ನೂ 10-15 ಸಲ ಮಾಡುವ 45 ನಿಮಿಷದ ಕ್ರಮವನ್ನು ಯೋಗ್ಯ ಗುರುವಿನಿಂದ ರೂಪಿಸಿ ದಿನಚರಿಯ ಖಡ್ಡಾಯ ಭಾಗವಾಗಿಸಿ ಕೊಳ್ಳಿ. ಇದರಿಂದ ಬೆವರಿಳಿದು ಮೆದುಳು, ಶ್ವಾಸಕೋಶ, ದೇಹದ ಎಲ್ಲ ಇಂದ್ರಿಯಗಳು ಚುರುಕಾಗುವವು. ಮುಂದಕ್ಕೆ ಅಂಗಾಂಗ, ಎಲ್ಲ ಸಂದುಗಳು ಜಡ್ಡುಗಟ್ಟಿ ನಿರುಪಯೋಗ ದಿಂದಾಗಿ ಕೋಶಗಳು ನಾಶವಾಗಿ ಮೆದುಳು ಮತ್ತು ಶ್ವಾಸಕೋಶ ಕ್ರಮೇಣ 40% ನಿಷ್ಕ್ರಿಯವಾಗುವುದು ತಪ್ಪೀತು. Use or else loose ಸಿದ್ಧಾಂತ ಇಲ್ಲಿ ಒಪ್ಪುತ್ತದೆ.



ವಿಶ್ವಯೋಗ ದಿನದಂದು ಉಡುಪಿಯ ರಾಜಾಂಗಣದಲ್ಲಿ ಪೂಜ್ಯ ಪೇಜಾವರ ಶ್ರೀಯವರಿಂದ ಯೋಗ.....

2. ಆಸನಗಳ ಪ್ರತಿ ಹಂತದಲ್ಲೂ ಉಸಿರಾಟದ ಮೇಲೆ ನಿಗಾಬೇಕು. ಪೂರಕ, ಕುಂಭ, ರೇಚನ ಮತ್ತು ನಿಕುಂಭ - ಎಲ್ಲವೂ ಸಾಕಷ್ಟು ದೀರ್ಘವಾಗಿರಲಿ - ಯಾಂತ್ರಿಕವಲ್ಲ. ಸಮಯ ಪ್ರಾತಃ ಖಾಲಿಹೊಟ್ಟೆಯಲ್ಲಿ ಉತ್ತಮ-ತಪ್ಪಿದಲ್ಲಿ ಸಾಯಂಕಾಲ, ಮಳೆ, ಸೆಖೆ, ರಜಾದಿನ, ಸಮಯಾಭಾವ ಎನ್ನದೆ ಸ್ಥಿರತೆ ಮುಖ್ಯ. ಜಾಸ್ತಿ ಖುರ್ಚಿ ಮೇಲೆ ಕುಳಿತು

ಮಾಡುವ ಕೆಲಸವಾದರೆ ನಡುನಡುವೆ ಎದ್ದು ಸ್ವಲ್ಪ ಆಡ್ಡಾಡಿ, ದೀರ್ಘ ಉಸಿರಾಟ ಮತ್ತು 4-6 ಬಸ್ಕಿ ಮಾಡಿ.

3. ತಾನು ತರಬೇತಿ ಪಡೆದ ಕೇಂದ್ರ, ಶಾಲಾಮೈದಾನ್ ಪಾರ್ಕ್, ದಿನನಿತ್ಯ ಗುರುವಿನೆದುರಲ್ಲೆ ಅಭ್ಯಾಸ ಎಂದರಾಗದು. ಮನೆಯ ಅಟ್ಟಳಿಗೆಯಾ ನಿಗದಿತ ಕೋಣೆ- ಎಲ್ಲ ಸ್ಥಳವೂ ಅನುಕೂಲ.

4. ಪ್ರಾಯ 20ರ ಬಳಿಕ ದೇಹ ಎತ್ತರ ಆಗುವ ಪ್ರಕ್ರಿಯೆ ನಿಂತು ನಂತರ ಏನಿದ್ದರೂ ಅಡ್ಡ ಬೆಳೆಯುವಿಕೆ. ಇದರಿಂದ ಜಾಸ್ತಿ ತಿಂದುದೆಲ್ಲ ಕೊಬ್ಬಾಗುವುದು, ಸಕ್ಕರೆ ರಕ್ತದೊಂದಿಗೆ ಬೆರೆಯುವುದು. ಕ್ರಮೇಣ 30-45ರಲ್ಲಿ ಅನೇಕ ರೋಗಗಳು ಜಡದೇಹದೊಳಗೆ ಹುಟ್ಟುವುವು. ಒಮ್ಮೆ ಶರೀರ ರೋಗಗ್ರಸ್ತವಾದಲ್ಲಿ ಯಾವ ಶಿಸ್ತು ಆಸನದಿಂದಲೂ ಅದನ್ನು ನಿವಾಳಿಸಲಾಗದು - ನಂತರದ್ದೆಲ್ಲ ಪ್ಯಾಚ್ ಅಪ್ ರಿಪೇರಿ. ಈ ಸ್ಥಿತಿ ತಡೆಯಬೇಕಾದರೆ ಪ್ರಾಯ 20-25ರಿಂದಲೇ ಈ ಶಿಸ್ತಿನ ಅಳವಡಿಕೆ ಅಗತ್ಯ .

5. ಜೀವನದಲ್ಲಿ ತಡವಾಗಿ ಈ ವೃತ್ತಿಗೆ ತೊಡಗುವವರಿಗೆ, ದೇಹದಲ್ಲಿ ಏನಾದರೂ ನ್ಯೂನತೆ ಇದ್ದರೆ, ಅಭ್ಯಾಸದಲ್ಲಿ ಯಾವುದೇ ಅಂಗ ಉಳುಕಿದರೆ ಯಾ ವೃದ್ಧಾಪ್ಯದ ಅಶಕ್ತತೆ ಜಾಸ್ತಿ ಆದರೆ ಪ್ಯಾಕೇಜನ್ನು (ಪುನರ್) ರೂಪಿಸುವಲ್ಲಿ ಗುರು ಯಾ ಡಾಕ್ಟರರ ಸಲಹೆ ಪಡೆಯಿರಿ. ಗಾಯದ ಮೇಲೆ ಬರೆ ಹಾಕದಿರಿ.

**ಜೀವನಶೈಲಿಯ ಪ್ರಧಾನ ಅಂಗಾಂಗಳು**

1. (ಸಾತ್ತ್ವಿಕ) ಆಹಾರ - ಗುಣ, ಮಿತಿ, ಕಾಲಾಂತರ, ಸೇವನೆ ಸಮಯ, ಸಾಕಷ್ಟು ತರಕಾರಿ, ಹಣ್ಣುಹಂಪಲು, ಮೊಳಕೆ ಬರಿಸಿದ ಕಾಳು, ಧಾನ್ಯ, ಕುಚ್ಚಲಕ್ಕಿ, ರಾಗಿ, ಕೆಂಪು ಗೋಧಿ, ಎಲ್ಲ ಒಳ್ಳೆಯದು. ಕಲುಷಿತ ಯಾ ರಾಸಾಯನಿಕ ಪದಾರ್ಥ ಮಿಶ್ರಿತ ತಿನಿಸುಗಳು ನಿಷಿದ್ಧ. ಉಪ್ಪು, ಸಿಹಿ, ಸಕ್ಕರೆ, ತುಪ್ಪ, ಕೊಬ್ಬು ಪದಾರ್ಥಗಳ ಮಿತಸೇವನೆ. ಹೊಟ್ಟೆ ತುಂಬುವ 2 ಹಿಡಿ ಮೊದಲೇ ಊಟ ನಿಲ್ಲಿಸಿ, ಬೊಜ್ಜುತನ ಎಲ್ಲ ರೋಗಗಳ ಮೂಲ.

2. ಸದಾ ದೈಹಿಕ ಯಾ ಮಾನಸಿಕ ಚಟುವಟಿಕೆ ಆದಷ್ಟು ನಡಿಗೆ, ಶುದ್ಧ ಪರಿಸರ, ನೈಸರ್ಗಿಕ ಆಹಾರಾಭ್ಯಾಸಗಳು. ದೇಹದಲ್ಲಿ ಸ್ವಲ್ಪ ಏರುಪೇರಾದರೆ ಡಾಕ್ಟರರಲ್ಲಿಗೆ ಓಟ, ಮಾತ್ರೆ ಸೇವನೆ ಇವೆಲ್ಲ ಕೂಡದು. ಆದಷ್ಟು ಇವು ತಾವಾಗಿಯೇ ಗುಣವಾಗಬೇಕು. ಜಾಸ್ತಿ ಇಂಗ್ಲಿಷ್ ಔಷಧಿಗಳು ದೇಹದ ರೋಗ ನಿರೋಧಕ ಶಕ್ತಿಯನ್ನು ಕ್ಷೀಣಿಸುವುವು.

3. ಅಸಹನೆ, ಅಹಂಕಾರ, ಮಾನಸಿಕ ಒತ್ತಡದಿಂದ ಚಿಂತೆ ಮತ್ತು ದುಶ್ಚಟಗಳಿಂದ ದೂರವಿರಿ. ಇವಕ್ಕೆ ಪೂರಕವಾಗಿ - ಸಮಪ್ರಾಯಸ್ಥರೊಂದಿಗೆ ಒಣಹರಟೆಗಿಂತ ತಮ್ಮ ಹಿರಿಕಿರಿಯರೊಂದಿಗೆ ಕ್ರಿಯಾಶೀಲತೆಯ ಕೂಡುಬಾಳ್ವೆ; ಪರರಲ್ಲಿ ಅನುಕಂಪ ಮತ್ತು ಉಪಕಾರ ಪ್ರವೃತ್ತಿ. ಯಾರಿಂದಲೂ ನಿರೀಕ್ಷೆ ಕೂಡದು.

4. ಮುಖ್ಯವಾಗಿ ಒಂದು ತಾತ್ತ್ವಿಕ ದೃಷ್ಟಿಕೋಣ: ಪ್ರಯತ್ನಿಸಿದ ಬಳಿಕ ದೊರಕಿದುದರಲ್ಲಿ ಸಂತೃಪ್ತಿ . ಸ್ವಾರ್ಥ, ಅತ್ಯಾಸೆ, ಪರರ ತುಲನೆ, ಗಾಳಿಗೋಪುರ ಕಟ್ಟಿ ನಂತರ ಕೊರಗುವುದು ಇವೆಲ್ಲ ಮೌಢ್ಯ .

5. ಪ್ರಾಯ 20-25ರಲ್ಲಿ ವ್ಯಕ್ತಿಯ ಎದುರಿಗೆ 2 ರಸ್ತೆಗಳು ತೋರುತ್ತವೆ. ಒಂದು: ಹೇರಳ ಸಂಪತ್ತು, ಯಶಸ್ಸು, ಪದವಿ. ಎರಡನೆಯದು: ಅವಶ್ಯಕ್ಕಾಗುವಷ್ಟು ಆದಾಯ, ಆರೋಗ್ಯ , ಮನಶ್ಶಾಂತಿ. ಇದನ್ನಾರಿಸಿದಲ್ಲಿ ನಡುಪ್ರಾಯದ ಬಳಿಕ ನಿತ್ಯ ರೋಗ, ನರಳಾಟ, ಸದಾ ಚಿಂತೆ ಮತ್ತು ವೃಥಾ ಖರ್ಚುಗಳಿಂದ ಬಚಾವಾಗುವಿರಿ. ಆರೋಗ್ಯಕ್ಕಿಂತ ಮಹಾನ್ ಸಂಪತ್ತಿಲ್ಲ.

ಈ ವಿಭಾಗದಲ್ಲಿ ಅಂದುದೆಲ್ಲ ಸರ್ವಕಾಲಕ್ಕೂ, ಎಲ್ಲ ಪ್ರಾಯಸ್ಥರಿಗೂ ಒಪ್ಪುವಂತಹ ಮಾತುಗಳು. ಆದರೆ ಯೋಗಾಸನ, ವ್ಯಾಯಾಮಲ್ಲ 2-3ತಲೆಮಾರಿನ ಆಧುನೀಕತೆಯಿಂದ ಸುಖಜೀವನಕ್ಕೆ ಮಾರುಹೋದ ತಪ್ಪಿಗಾಗಿ ಮಾಡಲೇಬೇಕಾದ ಪ್ರಾಯಶ್ಚಿತ್ತ .

ಅಂತಿಮವಾಗಿ ನಮ್ಮ ಸುತ್ತ ಕಾಣುವುದು ಹಿರಿಯರಿರಲಿ, ಮಕ್ಕಳಿರಲಿ, ಆರಂಭದ ಉತ್ಸಾಹ, ಶೂರತ್ತ್ವ. 10-12 ದರ್ಜೆಗೇರಿದಾಗ ಅಥವಾ ನೌಕರಿಯ ಒತ್ತಡ ಜಾಸ್ತಿ ಆದಾಗ ಎಲ್ಲ ಕಲೆ, ಕೌಶಲ್ಯ ಇತರ ಹವ್ಯಾಸಗಳು ಮೂಲೆಗುಂಪಾಗುತ್ತವೆ. ಆದರೆ ಯೋಗಾಧರಿತ ಬಾಳುವ ಮಾರ್ಗ ನಿಮ್ಮ ಭವಿಸ್ಯದ ನಿರ್ಣಾಯಕ. ಆದ್ದರಿಂದ ಇಲ್ಲಿ ಆ ತಾತ್ಸಾರ ಧೋರಣೆ ಸಲ್ಲದು. ಇದರಿಂದ ದೊರಕಬಹುದಾದ ಪ್ರತಿಫಲಗಳೆಂದರೆ. ಪ್ರಾಯ 70ರ ಬಳಿಕವೂ ಆವರಿಸದ ವೃದ್ಧಾಪ್ಯ , ಅಳಿಯದ ಆತ್ಮವಿಶ್ವಾಸ, ದೇಹದ ಚಟುವಟಿಕೆ, ದಿನನಿತ್ಯದ ಬಣ್ಣಬಣ್ಣದ ಮಾತ್ರೆಗಳ ಕಾಟವಿಲ್ಲ.

ನಿಮ್ಮ ಜೀವನಮಾರ್ಗವನ್ನು ಹಂತಹಂತವಾಗಿ ಕೃಷಿ ಮಾಡಿ ನೀವೇ ರೂಪಿಸಿದುದರಿಂದ ವ್ಯಕ್ತಿತ್ವ ಇತರರಿಗೆ ಮಾರ್ಗ ದರ್ಶಕವಾದೀತು.

(**ವಿ.ಸೂ.:** ಬಳಗದ ಸದಸ್ಯರು ಹೆಚ್ಚಿನ ವಿವರಗಳನ್ನು ಪಡೆಯಲು ಆಸಕ್ತಿ ಇದ್ದಲ್ಲಿ ಲೇಖಕರನ್ನು 23580480 ಅಥವಾ 9964772660 ಮೂಲಕ ಸಂಪರ್ಕಿಸಬಹುದಾಗಿದೆ)

ವೈಚಾರಿಕ ಲೇಖನ

# ಮೌನದ ಮಹತ್ವ

ಮೌನ ಬಂಗಾರ - ಮಾತು ಬೆಳ್ಳಿ ಎಂಬ ಗಾದೆ ಮಾತಿನಂತೆ ಮೌನಕ್ಕೆ ಬೆಲೆ, ಗೌರವ ಹೆಚ್ಚು. ನಮ್ಮ ಮನಸ್ಸು ಸದಾ ಗೊಂದಲ, ಆತಂಕಗಳಿಂದ ಕೂಡಿ ಮನಸ್ಸಿಗೆ ತೋಚಿದ್ದನ್ನು ಆಡುತ್ತೇವೆ. ಅನಾವಶ್ಯಕ ಮಾತುಗಳಿಂದ ಮನುಷ್ಯನ ತೂಕ ಕಮ್ಮಿಯಾಗುತ್ತದೆ.

ಒಮ್ಮೆ ನಾನು ಸಂಜೆ ಹೊತ್ತು ಮಹಡಿ ಮೇಲೆ ಹೋಗಿ ಟೆರೇಸ್‌ನಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದೆ. ಇದರಿಂದ ಮನಸ್ಸು ಪ್ರಶಾಂತವಾಯಿತು. ಮೇಲೆ ನಿರ್ಮಲವಾದ ಆಕಾಶ. ಮನೆ ಮುಂದೆ ಸುಂದರವಾದ ಪಾರ್ಕು. ಮರಗಳಲ್ಲಿ ಬಿಟ್ಟ ಹೂಗೊಂಚಲ ಸೊಬಗು, ಎಲೆಗಳ ಸರಸರ ಸದ್ದು, ಸಂಪಿಗೆ ಮರದಿಂದ ಹೊರಡುವ ಸುವಾಸನೆ, ಬಣ್ಣ ಬಣ್ಣದ ಚಿಟ್ಟೆಗಳ ಹಾರಾಟ, ಪಾರ್ಕಿನಲ್ಲಿ ಆಡುವ ಮುಗ್ಧ ಮಕ್ಕಳ ಕಿಲಕಿಲನಗು, ಪುಟ್ಟ ಪುಟ್ಟ ಹೆಜ್ಜೆ ಹಾಕಿ ನಡೆವ ಕಂದನನ್ನು ಕಂಡು ಅಮ್ಮನ ಮುಖದಲ್ಲಿನ ಸಂತಸ ಒಂದೇ ಎರಡೇ ಚಿಕ್ಕ ಚಿಕ್ಕ ಆನಂದದ ಕ್ಷಣಗಳನ್ನು ಅನುಭವಿಸಬೇಕಾದರೆ ನಮ್ಮ ಮನಸ್ಸು ಮೌನವಾಗಿರಬೇಕು. ತುಂಬಾ ಮಾತಿನಿಂದ ನಮ್ಮ ದೈಹಿಕ ಶಕ್ತಿ ಕುಂದಿ ಆಯಾಸವಾಗುತ್ತದೆ. ಅಪವಾದ, ಜಗಳ, ನಿಂದನೆ, ಬೇಡದ ಮಾತುಗಳಿಗಿಂತ ಮೌನದ ಮೊರೆ ಹೋಗುವುದರಲ್ಲಿ ಲಾಭವಿದೆ.

ಉತ್ತಮ ಮಂಥನಶೀಲರಾಗದೆ ಚಿಂತನಶೀಲರಾಗಬೇಕು. ಸಂಸ್ಕಾರವಂತ ಆದರ್ಶವ್ಯಕ್ತಿ, ಜ್ಞಾನಿ ಸದಾ ಮೌನದಿಂದಿರುತ್ತಾರೆ. ''ಹತ್ತು ನುಡಿಗಿಂತ ಒಂದು ಮುತ್ತಿನಂಥ ಮಾತು ಲೇಸು'' ಎಂಬ ಗಾದೆ ಮಾತು ಸುಳ್ಳಲ್ಲ. ಮಕ್ಕಳ ಸಾಧನೆಯನ್ನು ಕಂಡು ಕಣ್ಣಲ್ಲೆ ಮೆಚ್ಚುಗೆ ಸೂಸಿ ಬೆನ್ನು ತಟ್ಟಿದರೆ ಸಾಕು. ಸದಾ ಮಾತನಾಡುತ್ತಿರುವುದು ಸುಲಭ. ಆದರೆ ಮೌನದಿಂದಿರುವುದು ತುಂಬಾ ಕಷ್ಟ. ದಿನದಲ್ಲಿ ಒಂದು ಘಂಟೆಯಾದರೂ ಮೌನ ಪಾಲಿಸಬೇಕು. ಇದರಿಂದ ಮನಸ್ಸು ಪ್ರಶಾಂತವಾಗಿ ನಮಗೆ ಮುಂದಿನ ದಾರಿ ನಿಚ್ಚಳವಾಗಿ ಗೋಚರಿಸುವುದು. ಅಲ್ಲದೆ ಏನು ಮಾಡಬೇಕು, ಏನು ಮಾಡಬಾರದು ಎಂಬ ಅರಿವು ಮೂಡಿ ಚಿತ್ತಶುದ್ಧಿಯಿಂದ ಸದಾ ಸಕಾರಾತ್ಮಕ ಯೋಚನೆಗಳೇ ಹುಟ್ಟುತ್ತವೆ. ಮನಸ್ಸು ಗೊಂದಲಗೊಂಡರೆ ಮನಸ್ಸು ಇಷ್ಟ ಬಂದತ್ತ ಹರಿದು ನಕಾರಾತ್ಮಕ ಚಿಂತನೆಯಿಂದ ಯಾವ ಕೆಲಸವೂ ಸಮರ್ಪಕವಾಗಿ ಮಾಡಲಾಗುವುದಿಲ್ಲ. ಮನಸ್ಸಿನ ಏಕಾಗ್ರತೆಯ ಕೊರತೆಯಿಂದ ಮಾಡುವ ಕೆಲಸದಲ್ಲಿ ಕುಶಲತೆ ಇಲ್ಲದೆ ಬೇಕಾಬಿಟ್ಟಿಯಾಗಿ ಮಾಡುತ್ತೇವೆ.

ಮೌನದಿಂದ ಶ್ವಾಸೋಚ್ಛ್ವಾಸ ನಿಧಾನವಾಗಿ ನಾವು ಆರೋಗ್ಯವಂತರಾಗಬಹುದು ಅಲ್ಲದೆ ಮೌನ ಹೆಚ್ಚಾದಂತೆ ಮನಸ್ಸು ಒಳಮುಖವಾಗಿ ಹರಿದು ಅಂತರ್ಯದ ಮಾತುಗಳನ್ನು ಕೇಳಿಸಿಕೊಳ್ಳಬಹುದು ಎಂದು ತಿಳಿದವರು ಹೇಳುತ್ತಾರೆ.

ಅಂತಃಮುಖಿಯಾದಾಗ ಆತ್ಮದ ಗುಣಗಳಾದ ಶಾಂತಿ, ಪ್ರೇಮ, ಆನಂದದ ಅನುಭವವನ್ನು ಹೊಂದಬಹುದು. ಇದು ಅನೇಕ ವರ್ಷಗಳ ಸಾಧನೆಯಿಂದ ಸಾಧ್ಯ. ಒಮ್ಮೆ ಅಲೌಕಿಕ ಅನುಭವ ಪಡೆದ ಮನಸ್ಸು ಮತ್ತೆ ಲೌಕಿಕ ಜಗತ್ತಿಗೆ ಹೋಗಲು ನಿರಾಕರಿಸಬಹುದು. ಧ್ಯಾನ, ರೇಖಿ, ಪ್ರಾಣಿಕ್ ಹೀಲಿಂಗ್ ಇತ್ಯಾದಿ ವಿಧಾನಗಳಲ್ಲೂ ನಮ್ಮ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಯೂನಿವರ್ಸಲ್ ಎನರ್ಜಿ ಮೂಲಕ ರೋಗವನ್ನು ಗುಣಪಡಿಸುವ ವಿಧಾನಗಳಿವೆ.


ಒಟ್ಟಾರೆ ಮೌನದಿಂದ ಸಾಧಿಸಿದ ಆತ್ಮಬಲ, ಪ್ರಸನ್ನತೆ ಪ್ರಶಾಂತತೆ, ಸಮಾಧಾನ, ತೃಪ್ತಿಗಳಿಂದಾಗಿ ಮನುಷ್ಯನ ಮುಖದಲ್ಲಿ ವಿಶೇಷ ಕಳೆ ಹೊಮ್ಮುತ್ತದೆ. ಮಿತವರಿತು ಮಾತನಾಡುವ ಸಾಧು, ಸಂತರ, ಆಧ್ಯಾತ್ಮಿಕ ವ್ಯಕ್ತಿಗಳಲ್ಲಿ ಪರಿಪಕ್ವತೆಯನ್ನು ಕಾಣುತ್ತೇವೆ.

ಜಾಹ್ನವಿ ಆಚಾರ್ಯ

## ಆನಂದ ಬಳಗ ಪ್ರೀಮಿಯರ್ ಲೀಗ್ 2016 : ಕ್ರಿಕೆಟ್ ಪಟುಗಳಿಗೆ ಆಹ್ವಾನ!

ಆನಂದ ಬಳಗವು ಮೊತ್ತ ಮೊದಲ ಬಾರಿಗೆ ಸಂಯೋಜಿಸಿದ್ದ ಎ.ಪಿ.ಎಲ್. 2014ರ ಭರ್ಜರಿ ಯಶಸ್ಸಿನಿಂದ ಸ್ಫೂರ್ತಿಗೊಂಡ ಯುವ ವಿಭಾಗವು ಮತ್ತೊಮ್ಮೆ ಎ.ಪಿ.ಎಲ್.ನ್ನು ಹಮ್ಮಿಕೊಂಡಿದೆ. ದಿನಾಂಕ 6.11.2016 ರಂದು ಓಕುಳಿಪುರಂ ರೈಲ್ವೇ ಕ್ರೀಡಾಂಗಣದಲ್ಲಿ ದಿನಪೂರ್ತಿ ನಡೆಯಲಿರುವ ಎ.ಪಿ.ಎಲ್. 2016ರಲ್ಲಿ ಆನಂದ ಬಳಗದ ಸದಸ್ಯರೇ ಪ್ರಯೋಜಿಸಿರುವ ಎಂಟು ತಂಡಗಳು ಪ್ರಶಸ್ತಿಗಾಗಿ ಸೆಣೆಸಾಡಲಿವೆ. ಎಪಿಎಲ್ 2016 ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಆಡಲು ಆಸಕ್ತಿ ಇರುವ ಬಳಗದ ಕ್ರೀಡಾ ಪಟುಗಳು ತಮ್ಮ ವಿವರಗಳನ್ನು ದಿನಾಂಕ 31.7.2016ರ ಒಳಗಾಗಿ http://anandabalaga.org/apl. ಲಿಂಕ್‌ನ ಮೂಲಕ ನಿಗದಿತ ಅರ್ಜಿಯನ್ನು ಭರ್ತಿಮಾಡಿ ನೋಂದಾಯಿಸಬೇಕಾಗಿ ವಿನಂತಿ.

ಹೆಚ್ಚಿನ ವಿವರಗಳಿಗೆ
ಶ್ರೀ ಎಂ. ದಿನೇಶ್ ರಾವ್ (ಮೊ. 9945688955)
ಶ್ರೀ ಎಂ.ಕೆ. ಗುರುಮೂರ್ತಿ (ಮೊ. 9844022692)
ಶ್ರೀ ಸಂದೀಪ್‌ರಾವ್ (9845098150)
ಅವರನ್ನು ಸಂಪರ್ಕಿಸಬಹುದಾಗಿದೆ. ಸಕಾಲದಲ್ಲಿ ಹೆಸರು ನೋಂದಣಿ ಮಾಡಿದರೆ, ತಂಡಗಳ ರಚನೆಗೆ ಅನುಕೂಲ ವಾಗಲಿದೆ.
(ಹೆಚ್ಚಿನ ವಿವರಗಳನ್ನು ಭೃಗುವಾಣಿಯ ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.)


# ಬೃಂದಾವನ ಗೆಸ್ಟ್ ಹೌಸ್

# BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block, Bhuvaneshwari Nagar
BSK 3rd Stage, Bangalore - 560 085 E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ : ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

---

ಶುಭಾಶಯಗಳನ್ನು ಕೋರುವವರು

|| ಹರಿಃ ಓಂ ||



# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

## ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

# ಅಮೇರಿಕದಲ್ಲಿ ಭಾರತೀಯರು ಮೂಡಿಸಿದ ಹೆಜ್ಜೆಗಳು

**ಅಮೇರಿಕಾದಲ್ಲಿರುವ ಭಾರತೀಯರ ಕೆಲವು ವಿವರಗಳನ್ನು ಅಂಕಿ-ಅಂಶಗಳ ಸಹಿತ ಚರ್ಚಿಸಿದ್ದಾರೆ ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾವ್‌ರವರು ಈ ವಿಶೇಷ ಲೇಖನದಲ್ಲಿ -ಸಂ.**

ಭಾರತೀಯರು ಮತ್ತು ಅಮೇರಿಕನ್ನರ ನಡುವಣ ಬಾಂಧವ್ಯಕ್ಕೆ ಒಂದು ಶತಮಾನದ ಇತಿಹಾಸವಿದೆ. ಈ ಇತಿಹಾಸದ ಚಾಲನೆ 1904ರಿಂದಲೇ ಆರಂಭವಾಗಿತ್ತು. ಆದರೆ ಅಂದು ಬ್ರಿಟೀಷರ ಆಳ್ವಿಕೆಯಲ್ಲಿರುವ ಭಾರತದಿಂದ ಅಮೇರಿಕದ ಕೃಷಿ ಭೂಮಿಯಲ್ಲಿ ಕಾರ್ಯನಿರ್ವಹಿಸಲು ಹೋದವರ ಸಂಖ್ಯೆ ಕೇವಲ ಆರು ಸಾವಿರದಷ್ಟು ಮಾತ್ರವಿತ್ತು. ಆಗ ಭಾರತೀಯರನ್ನು ''ಬಿಳಿಯರು'' ಎಂದು ಸಂಭೋದಿಸುತ್ತಿದ್ದರು. ಆದರೆ ಮುಂದಿನ ದಿನಗಳಲ್ಲಿ ಅಮೇರಿಕದ ಸುಪ್ರಿಂ ಕೋರ್ಟು - ಭಾರತೀಯರನ್ನು ಬಿಳಿಯೇತರರೆಂದು ಗುರುತಿಸಿತ್ತು. ಅರ್ಥಾತ್ ಭಾರತೀಯರು 'ಬ್ರೌನ್ ಪೀಪಲ್' ಎಂಬ ಅನಧಿಕೃತ ಗುರುತು ಪಟ್ಟಿ ಹೊಂದಿದ್ದರು.

ಆದರೆ ಮುಂದಿನ ದಿನಗಳಲ್ಲಿ ಭಾರತೀಯರಿಗೆ ವಲಸೆ ಬರಲು ನಿರಾಕರಿಸಲಾಗಿತ್ತು. ಮುಂದೆ 1965ರಲ್ಲಿ ವಲಸೆ ಕಾನೂನಿನಲ್ಲಿ ಪರಿವರ್ತನೆ ಮಾಡಿದ ಕಾರಣದಿಂದ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗುತ್ತಾ, ಪ್ರಸ್ತುತ ಭಾರತೀಯರು 2 ಕೋಟಿ 10 ಲಕ್ಷ ಮಂದಿಯಿರುವುದು ದೃಢಪಟ್ಟಿದೆ. ಅಮೇರಿಕದಲ್ಲಿರುವ ಬಿಳಿಯರು ಬುದ್ಧಿವಂತರಲ್ಲದ ಕಾರಣ. ಗಣಿತದ ಪ್ರೊಫೆಸರುಗಳು, ಡಾಕ್ಟರುಗಳು, ವಿಜ್ಞಾನಿಗಳೂ ಭಾರತದಿಂದಲೇ ವಲಸೆ ಬಂದು ಅಲ್ಲಿ ನೆಲೆಸುವಂತಾಯಿತು. ಪ್ರಸ್ತುತ ಅಮೇರಿಕದ ಜನಸಂಖ್ಯೆಯಲ್ಲಿ ಭಾರತೀಯರು ಶೇಕಡಾ 1 ರಷ್ಟಿರುವುದು ಬೆಳಕಿಗೆ ಬಂದಿದೆ. ಸಂಪೂರ್ಣ ಏಷ್ಯನ್ನರ ದೃಷ್ಟಿಯಲ್ಲಿ ಗಮನಿಸಿದರೆ ಚೀನಿಯರು. ಶೇಕಡಾ 23ರಷ್ಟು ಹೊಂದಿದ್ದರೆ. ಫಿಲಿಪ್ಪಿನೋಸ್ ಜನರು ಶೇಕಡಾ 19ರಷ್ಟಿರುವುದೂ ನಂತರದ ಸ್ಥಾನವನ್ನು ಭಾರತ ಆಕ್ರಮಿಸಿ ಶೇಕಡಾ 18ರಷ್ಟು ವಲಸೆ ಬಂದಿದ್ದಾರೆ. ಭಾರತೀಯ ಮುಸ್ಲಿಮರು ಶೇಕಡಾ 10ರಷ್ಟು ಅಲ್ಲಿ ಸ್ಥಿತರಾಗಿದ್ದಾರೆ.

ಭಾರತೀಯ ಮೂಲದ ಅಮೇರಿಕನ್ನರು ವಯೋಮಾನ ರೀತ್ಯಾ ಸರಾಸರಿ 37 ವರ್ಷ ವಯಸ್ಸಿನವರಾಗಿರುವುದರಿಂದ, ಭಾರತೀಯ ಯುವ ಜನರು ಅಮೇರಿಕದೆಡೆಗೆ ಹೆಚ್ಚು ಆಕರ್ಷಿತರಾಗಿರುವುದು ಕಂಡು ಬರುತ್ತದೆ. ಅಮೇರಿಕದಲ್ಲಿ ಸ್ಥಿತರಾದವರಲ್ಲಿ ಶೇಕಡಾ 71ರಷ್ಟು ವಿವಾಹಿತರಾಗಿದ್ದಾರೆ. ಅಲ್ಲಿ ಸ್ಥಿತರಾಗಿರುವ ಭಾರತೀಯರಲ್ಲಿ ಭಾರತದಲ್ಲಿಯೇ ಪದವಿ ಮತ್ತು ಹೆಚ್ಚಿನ ಕಲಿಕೆಯನ್ನು ಪಡೆದವರು ಶೇಕಡಾ 70 ಇರುವುದು ವ್ಯಕ್ತವಾಗಿದೆ. ಪ್ರಸ್ತುತ ಭಾರತೀಯ ಅಮೇರಿಕನ್ನರು ಅಲ್ಲಿ ಸ್ವಂತ ನಿವಾಸ ಹೊಂದಿದವರು ಶೇಕಡಾ 57 ಆಗಿದ್ದಾರೆ. ಅಮೇರಿಕದಲ್ಲಿದ್ದು ಬಡತನದಲ್ಲಿರುವವರು. ಶೇಕಡಾ 9 ಮಂದಿಯಿದ್ದಾರೆ. ಭಾರತೀಯ ಅಮೇರಿಕನ್ನರ ವಾರ್ಷಿಕ ಆದಾಯ ಸರಾಸರಿ 40 ಲಕ್ಷ ರೂಪಾಯಿ ಆಗಿರುತ್ತದೆ. ಅಮೇರಿಕಾದ ''ನಾಸಾ''ದಲ್ಲಿ ಬಾಹ್ಯಾಕಾಶ ತಂತ್ರಜ್ಞರು ಸಿಂಹಪಾಲನ್ನು ಹೊಂದಿರುವುದು ಹೆಮ್ಮೆಯ ವಿಚಾರವಾಗಿದೆ. ನಾಸಾದಲ್ಲಿ ನಡೆಯುವ ಹೆಚ್ಚಿನ ಸಂಶೋಧನೆಗಳಲ್ಲಿ ದುಡಿಯುವ ಭಾರತೀಯರ ಸಂಖ್ಯೆ 10ರಲ್ಲಿ ನಾಲ್ಕು ಆಗಿರುವುದು ಭಾರತಕ್ಕೆ ಹಿರಿಮೆ-ಗರಿಮೆಯಾಗಿದೆ. ಒಟ್ಟಾರೆ ಭಾರತೀಯ ವಿಜ್ಞಾನಿಗಳ ಸಂಖ್ಯೆ ಶೇಕಡಾ 12ರಷ್ಟಿದ್ದಾರೆ.

ಭಾರತದಿಂದ ವಲಸೆ ಹೋಗಿ ಅಲ್ಲಿನ ನಾಗರಿಕರಾದ ಭಾರತೀಯ ಅಮೇರಿಕನ್ ಉದ್ಯಮಿಗಳ ಪೈಕಿ ಅತ್ಯಂತ ಶ್ರೀಮಂತರೂ ಇದ್ದು. ''ಜಾನ್ ಕಪೂರ್'' ಎಂಬಾತ 16 ಸಾವಿರ ಕೋಟಿ ರೂಪಾಯಿಯ ಉದ್ಯಮದ ಒಡೆತನ ಹೊಂದಿದ್ದಾರೆ. ಅಲ್ಲಿ ಭಾರತ್ ದೇಸಾಯಿ ಕುಟುಂಬ 15 ಸಾವಿರ ಕೋಟಿ ಉದ್ಯಮದ ಒಡೆಯರಾಗಿದ್ದಾರೆ. ರಮೇಶ್ ಸಾಧ್ವನಿಯೆಂಬ ಉದ್ಯಮ 15 ಸಾವಿರ ಕೋಟಿ ಸಂಪತ್ತು ಹೊಂದಿದ್ದಾರೆ. ಕೆ.ರಮೇಶ್ ಶ್ರೀರಾಮ್ ಎಂಬುವವರು 11 ಸಾವಿರ ಕೋಟಿ ಮೊತ್ತದ ಉದ್ಯಮದ ಒಡೆಯರು. ವಿನೋದ್ ಖೋಸ್ಲಾ ಎನ್ನುವವರು. 10 ಸಾವಿರ ಕೋಟಿ ರೂಪಾಯಿ ಶ್ರೀಮಂತವರ್ಗದಲ್ಲಿದ್ದಾರೆ.

**ಒಬಾಮ ಸರ್ಕಾರದಲ್ಲೂ ಭಾರತೀಯ ಹೆಸರುಗಳು ಮಿಂಚುತ್ತಿದೆ :**

ಅಮೇರಿಕದ ಆಡಳಿತದಲ್ಲಿ ಭಾರತೀಯರ ಚಾಣಾಕ್ಷತೆಯನ್ನು ಗುರುತಿಸಿದ ಒಬಾಮ ಅತ್ಯುನ್ನತ ಹುದ್ದೆಗಳಲ್ಲಿ ಭಾರತೀಯರನ್ನು ಕುಳ್ಳಿರಿಸಿರುವುದು ಭಾರತೀಯರ ಮುಡಿಗೆ ಕಲಶಪ್ರಾಯವೆನ್ನಬಹುದು. (1) ವಿಶ್ವ ಹಣಕಾಸು ಸಂಸ್ಥೆಯಲ್ಲಿ ಸುನಿಲ್ ಸಭರ್‌ವಾಲಾ, (2) ಅಮೇರಿಕದ ಅಟಾರ್ನಿಗಳಲ್ಲೊಬ್ಬರು ಪ್ರೀತ್ ಭರಾರಾ. (3) ವಿಜ್ಞಾನ ಪ್ರತಿಷ್ಠಾನದ ಮುಖ್ಯಸ್ಥರಾಗಿ ಸುಬ್ರಾಸುರೇಶ್ - ಏಷ್ಯಾ ಬ್ಯೂರೋದ ಪ್ರಿಯಾ ಐಯ್ಯರ್, ಅಮೇರಿಕ ಟ್ರೇಡ್ ರೆಪ್ರಸೆಂಟೆಟೀವ್ ರಾಯಭಾರಿ ಇಸ್ಲಾಮ್ ಸಿದ್ದಿಕಿ - ಇದೇ ವಿಧಾನದಲ್ಲಿ ಅಲ್ಲಿನ ಆಡಳಿತದ ಮುಖ್ಯಸ್ಥಾನಗಳಲ್ಲಿ ಒಟ್ಟು ಅಂದಾಜು 50 ಭಾರತೀಯರು ಸೇವೆ ಸಲ್ಲಿಸುತ್ತಿದ್ದಾರೆ. ಇದು ಭಾರತೀಯರು ಹೆಮ್ಮೆಪಡಬೇಕಾದ ವಿಚಾರವಲ್ಲವೇ?

ಅಮೇರಿಕದಲ್ಲಿ ಸ್ಥಿತರಾಗಿ ಅಲ್ಲಿ ಕಲಿಯುತ್ತಿರುವವರಲ್ಲಿ ತೈವಾನಿಗರು ಒಂದನೇ ಸ್ಥಾನದಲ್ಲಿದ್ದು, ಶೇಕಡಾ 73 ಕಲಿಕೆಯಲ್ಲಿ

ತೊಡಗಿದ್ದಾರೆ. ಭಾರತೀಯರು ಶೇಕಡಾ 71ರಷ್ಟಿದ್ದು, ಗಣನೀಯ ಸ್ಥಾನವನ್ನು ಆಕ್ರಮಿಸಿದ್ದಾರೆ. ಚೀನಿಯರು ಶೇಕಡಾ 52 ಹಾಗೂ ಫಿಲಿಪ್ಪಿನಿಸ್‌ಗಳು ಶೇಕಡಾ 48 ಇದ್ದಾರೆ.

ಪ್ರಸ್ತುತ ಅಮೇರಿಕದಲ್ಲಿ ಆಡಳಿತ ಮತ್ತು ಇತರ ಕ್ಷೇತ್ರಗಳಲ್ಲಿ ಜಾಣರು ಸೂಕ್ಷ್ಮವಾಗಿ ವ್ಯವಹರಿಸುವವರು ಬೇಕಿರುವುದರ ಪ್ರಯುಕ್ತ ಅತ್ಯಂತ ಬುದ್ಧಿವಂತರೆಂದು ಖ್ಯಾತರಾದ ಹಾಗೂ ಸಜ್ಜನರಾದ ಭಾರತೀಯರನ್ನು ವೀಸಾ ನೀಡಿ ಅಮೆರಿಕ ಕರೆದುಕೊಳ್ಳುತ್ತಿದೆ. ಭಾರತದಲ್ಲಿಯೂ ತಮ್ಮ ಮಕ್ಕಳು ಅಮೇರಿಕದಲ್ಲಿ ಓದಬೇಕು ಅಲ್ಲಿ ಸ್ಥಿರಾಗಬೇಕು ಎನ್ನುವ ಹಂಬಲದಿಂದ ತಂದೆ ತಾಯಂದಿರು ತಮ್ಮ ಸ್ವಂತ ಮನೆಗಳನ್ನು ಬ್ಯಾಂಕಿಗೆ ಅಡವಿಟ್ಟು ಮಕ್ಕಳನ್ನು ಕಳಿಸುತ್ತಿರುವುದು ಪ್ರಸ್ತುತ ದೃಶ್ಯ. ಆದರೂ ಭಾರತೀಯರು ಹೆಚ್ಚಾಗಿ ಅಮೇರಿಕಕ್ಕೆ ಬರುತ್ತಿರುವುದನ್ನು ಅಸಂತೋಷದಿಂದ ನೋಡುವ ರಿಪಬ್ಲಿಕನ್ ಪಕ್ಷ ಆಡಳಿತ ಗದ್ದುಗೆ ಹಿಡಿದರೆ ಪ್ರಸ್ತುತ ಭಾರತೀಯ ವಲಸೆಯವರನ್ನು ವಾಪಾಸು ಭಾರತಕ್ಕೆ ಕಳುಹಿಸಿದರೆ ಆಶ್ಚರ್ಯ ಪಡಬೇಕಿಲ್ಲ. ಆದರೆ, ಅಮೇರಿಕದ ಪ್ರಸ್ತುತ ಸ್ಥಿತಿಯನ್ನು ಗಮನಿಸಿದರೆ. ಡೆಮೋಕ್ರೇಟ್‌ರು (ಒಬಾಮ ಪಕ್ಷ) ಗದ್ದುಗೆಯೇರಬಹುದು. ಹಾಗಾದರೆ ಮಾತ್ರ ಭಾರತೀಯರಿಗೆ ಮುಂದೂ ಅಮೇರಿಕದಲ್ಲಿ ಸ್ಥಾನ ಸಿಕ್ಕೀತು ಗೇಟ್‌ಪಾಸ್ ದೊರಕಲಾರದು. ❀

## ಗುರುವಿನ ಗುಲಾಮನಾಗುವ ತನಕ...

**(ಶ್ರೀಮತಿ ಗೀತಾ ವಾಸುದೇವರಾವ್‌ರವರು ಅಧ್ಯಕ್ಷರ ಮಾತಿನಲ್ಲಿ ಪ್ರಸ್ತಾಪಿಸಿರುವಂತೆ, ಈ ದೇವರ ನಾಮದ ಪೂರ್ಣ ಪಾಠ ಈ ರೀತಿ ಇದೆ.)**

ರಾಗ : ಪಂತುವರಾಳಿ ರಚನೆ : ಪುರಂದರ ದಾಸರು

ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ।
ಪರಿಪರಿ ಶಾಸ್ತ್ರದವನೋದಿದರೇನು ವ್ಯಕ್ತವಾಯಿತು ಭಕುತಿ॥

ಆರು ಶಾಸ್ತ್ರವ ಓದಿದರೇನು ಮೂರು ಪುರಾಣ ಮುಗಿಸಿದರೇನು।
ಸಾಧು ಸಜ್ಜನರ ಸಂಘವ ಮಾಡದೆ ಧೀರನೆಂದು ತಾ ತಿರುಗಿದರೇನು॥

ಕೊರಳೊಲು ಮಾಲೆಯ ಧರಿಸಿದರೇನು
ಬೆರಳಲಿ ಜಪಮಣಿ ತಿರುಗಿದರೇನು ।
ಮರಳಿ ಮರಳಿ ಹೊರಳಿ ಬೂದಿಯೊಳು
ಮರುಳನಂದದಿ ತಿರುಗಿದರೇನು ॥

ದಾರುಣಿಯಲ್ಲಿ ಆಳಿಸಿದರೇನು ಶರೀರ ಸುಖವನು ಬಿಡಿಸಿದರೇನು।
ಮಾರಜನಕ ಸಿರಿ ಪುರಂದರ ವಿಠಲನ ಸೇರಿಕೊಂಡು
ತಾ ಪಡೆಯುವ ತನಕ ॥

## ಮಹಿಳಾ ವಿಭಾಗದ ನೇತೃತ್ವದಲ್ಲಿ ವಧು-ವರಾನ್ವೇಷಣೆ

**ಆನಂದ ಬಳಗದ ಮಹಿಳಾ ವಿಭಾಗದವರು ಕಳೆದ ಕೆಲವಾರು ವರ್ಷಗಳಿಂದ ಬಳಗದ ಸದಸ್ಯರ ಅನುಕೂಲಕ್ಕಾಗಿ ವಧು-ವರಾನ್ವೇಷಣೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದರ ಪ್ರಯೋಜನವನ್ನು ಈಗಾಗಲೇ ನೂರಾರು ಸದಸ್ಯರು ಪಡೆದುಕೊಂಡಿರುವುದು ಸಂತಸದ ವಿಚಾರ. ಈ ಕಾರ್ಯಕ್ರಮವು ಮುಖ್ಯವಾಗಿ ಬಳಗದ ಸದಸ್ಯರು ಮತ್ತು ಅವರ ಸಂಬಂಧಿಕರಿಗೆ ಮೀಸಲಾಗಿದ್ದು ಪ್ರತಿ ಬುಧವಾರ ಮತ್ತು ಶನಿವಾರ ಅಪರಾಹ್ನ ಗಂಟೆ 2.30 ರಿಮದ 4.30ರ ವರೆಗೆ ರಾಜಾರಾಮ್ ಮೋಹನ್ ರಾಯ್ ರಸ್ತೆಯಲ್ಲಿರುವ ಹೋಟೆಲ್ ವುಡ್‌ಲ್ಯಾಂಡ್ಸ್‌ನ ಚಾಂದಿನ ಹಾಲ್‌ನಲ್ಲಿ ನಡೆಸಲಾಗುತ್ತಿದೆ.**

**ಮಹಿಳಾ ವಿಭಾಗದ ಕಾರ್ಯಕರ್ತೆಯರು ಸೇವಾ ಮನೋಭಾವದಿಂದ ಈ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧೆಯಿಂದ ನಡೆಸುತ್ತಿರುವುದು ಸದಸ್ಯರೆಲ್ಲರಿಗೂ ತಿಳಿದಿರುವ ವಿಚಾರ.**

**ಬಳಗದ ಸದಸ್ಯರು ನಿಗದಿತ ವೇಳೆಯಲ್ಲಿ ಆಗಮಿಸಿ ಈ ಯೋಜನೆಯ ಸದುಪಯೋಗವನ್ನು ಪಡೆಯುವುದರೊಂದಿಗೆ ನಮ್ಮೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.**

**ಹೆಚ್ಚಿನ ಮಾಹಿತಿಗಳಿಗಾಗಿ ದಯವಿಟ್ಟು ಈ ಕೆಳಗಿನವರನ್ನು ಸಂಪರ್ಕಿಸಬೇಕಾಗಿ ವಿನಂತಿಸುತ್ತೇವೆ**

| | | |
|---|---|---|
| **ಶ್ರೀಮತಿ ವಿಜಯಲಕ್ಷ್ಮಿ ಭಟ್** | **ಶ್ರೀಮತಿ ಗೀತಾ ಪಿ.ಆರ್.ರಾವ್** | **ಶ್ರೀಮತಿ ಸುಧಾ ಎಂ.ರಾವ್** |
| **9844152107** | **9945938411** | **9901127738** |

*With Best Compliments from :*

# ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

**HOTEL**
**Sheethal**

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



**Sheethal**
**Residency**

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

ಎ. ಪ್ರಭಾಕರ ರಾವ್ ಮ್ಯಾನೇಜಿಂಗ್ ಪಾರ್ಟ್‌ನರ್

*With Best Compliments from :*

# MOOLA TOOLS LLP
# MOOLA TECHNOLOGIES (P) LIMITED
# ERKADI SYSTEMS

***Manufacturers of Ventilators, Monitors, Operation room equipments, Anaesthesia Machines and other equipments.***

# 109, Electronic City, 1st Phase, Hosur Road,
Bangalore - 560 100
Tel : 080 - 2852 2442, 2852 2443,
Fax : 080 - 2852 2441
***Email : sales@erkadi.com***

**K.V. Murthy Yerkadithaya**
Chairman

**K.Y. Ashok Murthy**
Managing Director

# ಸುದ್ದಿ ಸಂಗ್ರಹ

★ ಖ್ಯಾತ ಉದ್ಯಮಿ ಹಾಗೂ ಬಳಗದ ಪೋಷಕರಾದ ಶ್ರೀ ಕಮ್ಮಾಜೆ ಯಜ್ಞನಾರಾಯಣ ಹೇರ್ಳೆ ಮತ್ತು ಶ್ರೀಮತಿ ವಸಂತಿ, ದಂಪತಿಗಳ, ದ್ವಿತೀಯ ಪುತ್ರ ಚಿ. ಗೌತಮ್ ಇವರ ವಿವಾಹ ಶ್ರೀಮತಿ ಉಷಾ ಮತ್ತು ಶ್ರೀ ಭರತ್ ಸೋಸಲೆ ಇವರ ಪುತ್ರಿ ಸೌ. ನಿತ್ಯಾ ಎಂಬ ವಧುವಿನೊಂದಿಗೆ ದಿ. 23.6.2016ರಂದು ಬೆಂಗಳೂರು ಅರಮನೆ ಮೈದಾನ ಗಾಯತ್ರಿ ವಿಹಾರ ಆವರಣ ದಲ್ಲಿರುವ 'ವೃಕ್ಷ' ಸಭಾಂಗಣದಲ್ಲಿ ಅದ್ದೂರಿಯಿಂದ ನೆರವೇರಿದೆ. ಅಂದು ಸಂಜೆ ಅದೇ ಸಭಾಂಗಣದಲ್ಲಿ ಆರತಕ್ಷತೆ ಹಾಗೂ ದಿ. 25.7.2016 ರಂದು ಬ್ರಿಗೇಡ್ ಮಿಲೇನಿಯಂ ಎಂ.ಎಲ್.ಆರ್. ಕನ್ವೆನ್ಷನ್ ಸೆಂಟರಿನಲ್ಲಿ ವಧು-ವರರ ಗೃಹಪ್ರವೇಶ ಸಮಾರಂಭವು ವಿಜೃಂಭಣೆಯಿಂದ ಜರುಗಿದೆ.

★ ಬಳಗದ ಸಕ್ರಿಯ ಸದಸ್ಯ ದಂಪತಿಗಳಾದ ಶ್ರೀ ಮಧುಸೂದನ ಕಾವೂರು ಮತ್ತು ಶ್ರೀಮತಿ ವಿದ್ಯಾ ಕಾವೂರು ಅವರ ಪುತ್ರ ಚಿ. ಆದಿತ್ಯನ ಮದುವೆ ಶ್ರೀಮತಿ ಜ್ಯೋತಿ ಮತ್ತು ಡಾ. ಎನ್. ಶ್ರೀನಾಥ್ ದಂಪತಿಗಳ ಪುತ್ರಿ ಸೌ. ಚೈತ್ರಾ ಎಂಬ ವಧುವಿನೊಂದಿಗೆ ದಿ. 11.4.2016ರಂದು ಉಡುಪಿಯ ಶ್ರೀ ಗೋವಿಂದ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನೆರವೇರಿದೆ. ಬೀಗರ ಜಾತಣವು ಬೆಂಗಳೂರಿನ ಶ್ರೀ ಪುತ್ತಿಗೆ ಮಠದಲ್ಲಿ ದಿ. 14.4.2016ರಂದು ನೆರವೇರಿದೆ.

★ ಬಳಗದ ಸಾರ್ವಜನಿಕ ಸಂಪರ್ಕ ವಿಭಾಗದ ಸಂಚಾಲಕರಾದ ಶ್ರೀ ವೈ.ಜಯಂತರಾವ್ ಮತ್ತು ಶ್ರೀಮತಿ ಮಾಲಿನಿ ಜಯಂತರಾವ್‌ರವರ ಪುತ್ರ, ಶ್ರೀ ಅಜಯರಾವ್‌ರವರು ಬೆಂಗಳೂರಿನ ಉತ್ತರಹಳ್ಳಿಯಲ್ಲಿ ಖರೀದಿಸಿರುವ ಡಿ.ಎಸ್. ಮ್ಯಾಕ್ಸ್ ಸ್ವಸ್ತಿಕ್ ಪ್ಲಾಟ್‌ನಲ್ಲಿರುವ ನೂತನ 'ಭುವಿ'ಯ ಪ್ರವೇಶ ಸಮಾರಂಭ 3.4.2016ರಂದು ಅದ್ದೂರಿಯಿಂದ ನೆರವೇರಿದೆ.

★ ಬಳಗದ ಉತ್ಸಾಹೀ ಸದಸ್ಯರಾದ ಶ್ರೀ ಬಿ.ಆರ್. ನರಸಿಂಹ ರಾವ್ ಮತ್ತು ಶ್ರೀಮತಿ ಸಾವಿತ್ರಿಯವರ ಪುತ್ರ ಚಿ. ಕೃಷ್ಣಪ್ರಸಾದ್ ಅವರ ವಿವಾಹ ಶ್ರೀಮತಿ ಶೋಭಾ ಮತ್ತು ಶ್ರೀ ರಘುಪತಿ ಭಟ್, ಶಿರ್ವ ಇವರ ಪುತ್ರಿ ಸೌ. ರಾಗಿಣಿಯವರ ಜೊತೆ ದಿ. 11.2.2016ರಂದು ಶಿರ್ವದ ಶ್ರೀ ವಿಷ್ಣು ಮೂರ್ತಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನೆರವೇರಿದೆ. ಬೀಗರ ಔತಣವು ಮೂರನೇ ದಿನ ಉಡುಪಿಯ ಕಡಿಯಾಳಿ ದೇವಸ್ಥಾನದಲ್ಲಿ ಜರುಗಿದೆ.

## ಡಾ. ಕೆ.ಪಿ. ಪುತ್ತೂರಾಯರಿಗೆ ಪ್ರಶಸ್ತಿ

ಕರ್ನಾಟಕ ಸಾಂಸ್ಕೃತಿಕ ಪರಿಷತ್ತು ಹಾಗೂ ಸೃಷ್ಟಿ ಶಕ್ತಿ ಸಂಸ್ಥೆಯವರು ದಿ. 17.4.2016 ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಡಾ. ಕೆ.ಪಿ. ಪುತ್ತೂರಾಯರು ಶಿಕ್ಷಣ ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ, ''ಜೀವಮಾನ ಸಾಧನೆ ಪ್ರಶಸ್ತಿ 2016''ನ್ನು ನೀಡಿ ಗೌರವಿಸಿದ್ದಾರೆ. ಡಾ. ಪುತ್ತೂರಾಯರಿಗೆ ಹಾರ್ದಿಕ ಅಭಿನಂದನೆಗಳು.

## ಡಿವಿಜಿಯವರ 129ನೇ ಜನ್ಮದಿನಾಚರಣೆ

ಕಗ್ಗ ಗೀತೆಯ ಕರ್ತೃ-ದೇವನಹಳ್ಳಿ ವೆಂಕಟರಮಣ ಗುಂಡಪ್ಪನವರ 129ನೇ ಜಯಂತಿಯ ದಿನವಾದ ಮಾರ್ಚ್ 17ರಂದು ಕಹಳೆ ಬಂಡೆ ಉದ್ಯಾನವನದಲ್ಲಿ ಪ್ರತಿಷ್ಠಿತ ಡಿವಿಜಿಯವರ ಪುತ್ಥಳಿಗಳಿಗೆ ನಡಿಗೆದಾರರ ಸಂಘದ ಪರವಾಗಿ ಅಧ್ಯಕ್ಷ ಕೋಟೇಶ್ವರ ಸೂರ್ಯನಾರಾಯಣರಾವ್‌ರವರು ಮಾಲಾರ್ಪಣೆ ಮಾಡಿ ಗೌರವಿಸಿದರು. ಅಸಂಖ್ಯ ನಡಿಗೆದಾರರ ಸಮ್ಮುಖದಲ್ಲಿ ವಿದುಷಿ ಶಶಿಕಲಾರಿಂದ ಕಗ್ಗನುಡಿಗಳ ಸ್ಮರಣೆ ಹಾಗೂ ಕೋಟೇಶ್ವರ ಸೂರ್ಯನಾರಾಯಣ ರಾವ್‌ರವರು ''ದಾರ್ಶನಿಕ ಡಿವಿಜಿ ನಮನಂ ಸ್ಮರಾಮಿ'' ಎಂಬ ಸ್ವರಚನೆಯ ಗೀತೆಯನ್ನು ಹಾಡಿದರು.

## ನಿಧನ

ಆನಂದ ಬಳಗದ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯರವರ ತೀರ್ಥರೂಪರಾದ ಶ್ರೀ ಪೆರೋಡಿ ನಾರಾಯಣ ಕುದ್ದಣ್ಣಾಯರು ದಿನಾಂಕ 4.6.2016ರಂದು ದೈವಾಧೀನರಾಗಿದ್ದಾರೆ. ಮೃತರ ಸದ್ಗತಿ ಬಗ್ಗೆ ಉತ್ತರಕ್ರಿಯಾದಿಗಳು ಮತ್ತು ವೈಕುಂಠ ಸಮಾರಾಧನೆ ದಿ. 13.6.2016ರಿಂದ 17.6.2016ರವರೆಗೆ ನೆಕ್ಕಿಲಾಡಿಯ ಮೂರ್ತಿ ನಿವಾಸದಲ್ಲಿ ವಿದ್ಯುಕ್ತವಾಗಿ ನೆರವೇರಿದೆ. ಮೃತರಿಗೆ ಭೃಗುವಾಣಿಯ ಶ್ರದ್ಧಾಂಜಲಿ.

**ಗಮನಿಸಿ**

**ಸದಸ್ಯರಿಗೆ ಸಂಬಂಧಿಸಿದ ಸುದ್ದಿ ಸಮಾಚಾರಗಳನ್ನು ಈ ಅಂಕಣದಲ್ಲಿ ಪ್ರಕಟಿಸಲು ಅಂಚೆ ಅಥವಾ ಇ-ಮೇಲ್ ಮೂಲಕ ಸಂಪಾದಕರಿಗೆ ಸಕಾಲದಲ್ಲಿ ತಲುಪಿಸಬೇಕಾಗಿ ವಿನಂತಿ. -ಸಂ.**

# ದಕ್ಷಿಣ ಬೆಂಗಳೂರಿನ ಅತಿ ದೊಡ್ಡ

ವಿರಾಮ ತಾಣ, ಈಗ ನಿಮಗಾಗಿ ತೆರೆದಿದೆ.

ರಾಯಲ್ ಮೀನಾಕ್ಷಿ ಮಾಲ್

Come Enjoy Maadi!




## ರಾಯಲ್ ಮೀನಾಕ್ಷಿ ಮಾಲ್ ದಕ್ಷಿಣ ಬೆಂಗಳೂರಿನ ಅತಿ ದೊಡ್ಡ ಅತ್ಯುತ್ತಮವಾದ ಏಕೀಕೃತ, ಶಾಪಿಂಗ್ ಹಾಗೂ ಮನೋರಂಜನೆ ಕೇಂದ್ರ

- 4.3 ಲಕ್ಷ ಚ.ಅಡಿ ವಿಸ್ತೀರ್ಣದೊಂದಿಗೆ 850 ಕಾರ್ ನಿಲ್ಲಿಸಲು ಸ್ಥಳ, ದಕ್ಷಿಣ ಬೆಂಗಳೂರಿನ ಐಟಿ ವಲಯಕ್ಕೆ ಬಹಳ ಸಮೀಪದಲ್ಲಿದೆ.
- ಜೆ.ಪಿ.ನಗರ, ಬಿ.ಟಿ.ಎಂ. ಲೇಔಟ್, ಜಯನಗರ, ಬನಶಂಕರಿ ಮುಂತಾದ ನಿವಾಸಗಳಿರುವ ಬಡಾವಣೆಗಳಿಗೆ ಸಮೀಪದಲ್ಲಿದೆ.
- ಉದ್ದೇಶಿಸಲಾದ ಮಾನೋ ರೈಲ್ ನಿಲ್ದಾಣಕ್ಕೆ ಸಮೀಪದಲ್ಲಿದೆ.
- ಸೌಕರ್ಯಗಳು ಅಂತರರಾಷ್ಟ್ರೀಯ ಗುಣಮಟ್ಟದಾಗಿರುತ್ತವೆ.

**The brand mix includes:** • Cinepolis • Hyper City • Max • Croma • Reliance Timeout • Reliance Trends • Amoeba • Aharam-The Food Court • KFC, McDonald's • TGIF • Louis Philippe • Allen Solly • Reebok • Woodlands • Levi's • Wrangler • Lee • VIP Luggage • Mother Earth • Costa Coffee • Barista • FabIndia • Health & Glow • Nike • Rockport • Van Heusen • Swensens and other leading national and international brands/retail outlets.

Cinepolis | HyperCITY | sharan | max | Reliance TimeOut | Reliance trends | croma

**VISHALA INDIA COMMERCIAL DEVELOPERS PVT. LTD.**, No. E1/16, 1st Floor, 1st Cross, Syndicate Bank Colony
Bannerghatta Road, Bangalore 560 076. Tel: 26487299, Fax: 26487300
**E-mail: vishalaindia@gmail.com, www.vishalaindia.com, www.royalmeenakshimall.com**

Bhruguvani (April - June 2016) Regd. with RNI under No.KARKAN/2012/45587 No. of pages : 40 (36+4)




BENGALURU : Dickenson Road | Bhima Silver | Jayanagar | Koramangal | Rajajinagar | HBR Layout | Phoenix Marketcity
Mangalore | Hassan | Udupi | Dubai | Sharjah
www.bhimagold.in Customer Care: 077602 02255

If undelivered please return to:
**Ananda Balaga**
Jeevana Buildings, 2nd Floor
11, Kumara Park East, Bengaluru - 560 001

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02